ಹರಿಃ ಓಂ

ಶ್ರೀ ಲಕ್ಷ್ಮೀ ಹಯಗ್ರೀವಾಯ ನಮಃ

ಶ್ರೀಮದಾನಂದ ತೀರ್ಥ ಭಗವತ್ಪಾದಾಚಾರ್ಯ ಗುರುಭ್ಯೋ ನಮಃ
ಶ್ರೀ ಪರಿಮಳಾಚಾರ್ಯ ಗುರವೇ ನಮಃ

# ಶ್ರೀಮನ್ನ್ಯಾಯಸುಧಾ

## ಸಂಕ್ಷಿಪ್ತ ಪರಿಚಯಾತ್ಮಕ ನಿರೂಪಣೆ

ಶ್ರೀಮಜ್ಜಯತೀರ್ಥರಿಂದ ರಚಿತ
(ಶ್ರೀ ಟೀಕಾಚಾರ್ಯರು)



ಶ್ರೀ ಮಜ್ಜಯ ತೀರ್ಥರು (ಟೀಕಾ ಕೃತ್ಪಾದರು)
“ಶ್ರೀಮನ್ನ್ಯಾಯಸುಧಾ” ಗ್ರಂಥರಾಜವನ್ನು ರಚಿಸಿದವರು

ಶ್ರೀ ಮದಾನಂದ ತೀರ್ಥರ – ಅನುವ್ಯಾಖ್ಯಾನಕ್ಕೆ ಟೀಕಾ
(ಜಿಜ್ಞಾಸಾಧಿಕರಣಂ)

ಸಂಗ್ರಹ / ನಿರೂಪಣೆ
ಪಂ|| ಪ್ರೊ|| ಬದರೀನಾಥಾಚಾರ್ ಘೂಳಿ ಎಂ.ಎ.

SRI MANYAYA SUDHA - An Introduction in brief - Jignasadhikarana compiled and edited by Pandit / Professor Badarinathachar Ghooli M.A.
This is to introduce Sri Nyaya Sudha considered as a Magnum opus of Dwaitha System, as discussed in detail by Sri Jayatirtha Swamiji. To a beginner who is still unaware of the intricate contents of this work, this little work might help to study in detail under the guidance of a Sampradaya Scholar.

Copyright to Editor

First Impression - 1000 Copies April-2004

ಈ ಕಿರುಕೃತಿಯ ಮುದ್ರಣಕ್ಕಾಗಿ ಕೇವಲ ರೂ. 15/– ಮಾತ್ರ

Printed at **Gowri Graphics**
103/3, Old Police Station Building,
Mount Joy Extension, Hanumanthanagar,
Bangalore - 560 019 Ph. : 26612256 / 56999647

**ಗಣಕ ಅಕ್ಷರ ಜೋಡಣೆ**
**ಶ್ರೀ ರಾಘವೇಂದ್ರ ಎಂಟರ್‌ಪ್ರೈಸಸ್, ಬೆಂಗಳೂರು – 50 ದೂ : 26521294**

**ಶ್ರೀಮನ್ನ್ಯಾಯಸುಧಾ – ಪರಿಚಯಾತ್ಮಕ ಸಂಕ್ಷಿಪ್ತ ನಿರೂಪಣೆ**
**(ಜಿಜ್ಞಾಸಾಧಿಕರಣಂ)**
**ಸಂಗ್ರಹ / ನಿರೂಪಣೆ**
**ಪಂ ॥ ಪ್ರೊ ॥ ಬದರೀನಾಥಾಚಾರ್ ಘೂಳಿ ಎಂ.ಎ.**
**(ಮಾಧವ ಮಧ್ವ ಪ್ರಕಾಶನ)**
# 164, 7**ನೇ ಅಡ್ಡ ರಸ್ತೆ,** 9**ನೇ ಮುಖ್ಯ ಬೀದಿ,**
**ಬಿ.ಇ.ಎಂ.ಎಲ್. ಬಡಾವಣೆ,** 3**ನೇ ಹಂತ,**
**ರಾಜರಾಜೇಶ್ವರಿನಗರ, ಬೆಂಗಳೂರು** – 560 098
**ಫೋನ್ ನಂ.** : 28602191



**ಶ್ರೀ ಹರಿ**

**ಈ ಒಂದು ಕಿರು ಲೇಖನವನ್ನು ಬರೆಯುವಂತೆ ನಮ್ಮ ಕುಲಸ್ವಾಮಿ ಶ್ರೀ ಘೂಳಿ ಪ್ರಾಣದೇವರ ಪ್ರೇರಣೆಯಾಯಿತು. ನಾನು ಪಂಡಿತನಲ್ಲ. ಪಾಂಡಿತ್ಯವಂತೂ ಮೊದಲೇ ಇಲ್ಲ. ಆದರೆ ನಾನು ನಮ್ಮ ತಂದೆಯವರಾದ ಪರಮಪೂಜ್ಯ ಪಂಡಿತರತ್ನ ಶ್ರೀ ಘೂಳಿ ಕೃಷ್ಣಮೂರ್ತ್ಯಾಚಾರ್ಯರ ಅಡಿಗಳಲ್ಲಿ ೧೯೮೭ ರಿಂದ ೧೯೯೧ ರ ವರೆಗೆ ಶ್ರೀ ಮನ್ನ್ಯಾಯಸುಧಾ ಹರಿಗುರುಗಳ ಅನುಗ್ರಹದಿಂದ ಆಗಿ ೧೯೯೧ (ಪ್ರಜೋತ್ಪತ್ತಿ ಮಾರ್ಗಶೀರ್ಷ ಬಹುಳ ಪ್ರತಿಪತ್) ರಂದು ಶ್ರೀಮಜ್ಜಯತೀರ್ಥರ ದಿವ್ಯ ಸನ್ನಿಧಾನದಲ್ಲಿ ಗ್ರಂಥ ಸಮರ್ಪಣೆ ಆಯಿತು. ಪಾಠ ಹೇಳಿಸಿಕೊಳ್ಳಲು ಶ್ರೀಮಾನ್ ಮ॥ಶಾ॥ಸಂ॥ ದೊಡ್ಡಿ ಗೋಪೀನಾಥರಾಯರು, ದಿವಂಗತ ಶ್ರೀ ಡಾ. ಕೆ.ಆರ್.ಆಚಾರ್ ಇತ್ಯಾದಿ ಆಗಿ ೮ ಜನ ಶಿಷ್ಯಂದಿರಿದ್ದರು. ಆ ಸಮಯದಲ್ಲಿ ನಾನು ಕೇಳಿದ್ದನ್ನು ಬರೆದಿದ್ದೆ. () ಅದರ ಆಧಾರದ ಮೇಲೆ ಮತ್ತು ಪಾಠ ಕೇಳಿದಾಗ ನೆನಪಿದ್ದದ್ದನ್ನು ಒಂದು ಕಿರು ಲೇಖನವಾಗಿ ಬರೆಯಬೇಕೆಂಬ ಹಂಬಲವಾಯಿತು. ಈ ಕಾರಣದಿಂದ ಇದು ನಿಮ್ಮ ಕೈ ಸೇರುತ್ತಿದೆ. ಸದ್ವೈಷ್ಣವರು ಇದನ್ನು ಬರಮಾಡಿಕೊಂಡು ಆಶೀರ್ವದಿಸಬೇಕು. ಈ ಕೃತಿ ಪಂಡಿತರಿಗಾಗಿ ಅಲ್ಲ. ಆದರೂ ಅವರ ಪಾವನ ಕೈ ಸೇರಿದಾಗ ಏನಾದರೂ ನ್ಯೂನ್ಯತೆಗಳಿದ್ದಲ್ಲಿ ಕೃಪೆಮಾಡಿ ತೋರಿಸಿದರೆ ಚಿರಋಣಿಯಾಗಿರುತ್ತೇನೆ.**

ಹರಿಃ ಓಂ

## ಅರಿಕೆ :

**ಶ್ರೀಮನ್ನ್ಯಾಯಸುಧಾ** ಒಂದು ಉದ್ಗ್ರಂಥ. ಸಂಸ್ಕೃತ ಭಾಷೆಯಲ್ಲಿ ತರ್ಕಗಳಿಂದ ಕೂಡಿದ್ದು. ಅದನ್ನು ಪಂಡಿತರಷ್ಟೆ ಓದಿ ಅಧ್ಯಯನ ಮಾಡುವುದಾಗಿದೆ. ಸಾಮಾನ್ಯ ಜನರಿಗೆ **ಶ್ರೀಸುಧಾ** ಅಂದರೆ ಏನು ? ಅದರಲ್ಲಿ ಏನನ್ನು ಹೇಳಲಾಗಿದೆ ? ನಮ್ಮಂಥವರು ತಿಳಿಯಲು ಅಸಾಧ್ಯ. ವೈಷ್ಣವ ಜನ್ಮ ಬಂದಾಗ ಒಂದು ಸಲವಾದರೂ **ಶ್ರೀನ್ನ್ಯಾಯಸುಧಾ** ಅಧ್ಯಯನ ಮಾಡಬೇಕೆಂದು ಹೇಳುತ್ತಾರೆ. ಬೇಡ ಬಿಡಿ ನಮಗಂತೂ ಆ ಭಾಗ್ಯ ಭಗವಂತ ಕರುಣಿಸಿಲ್ಲ. ಅಂತ ನೊಂದ ಸಾತ್ವಿಕ ಜನರಿಗಾಗಿ **ಶ್ರೀನ್ನ್ಯಾಯಸುಧಾ** ಬಗ್ಗೆ ಆದರ ಹುಟ್ಟಿ ಮುಂದೆ ಶ್ರೀಶಾನುಗ್ರಹದಿಂದ ಸುಧಾ ಪಾಠವನ್ನು ಸುಲಭವಾಗಿ ತಿಳಿಸಿಕೊಡುವ ವಿದ್ವಾಂಸರಿಂದ ಪಾಠ ಕ್ರಮೇಣ ಅಧ್ಯಯನ ಮಾಡುವಂತಾದರೆ ಈ ಪ್ರಯತ್ನ ಸಾರ್ಥಕ.

ಸಜ್ಜನರು ಶ್ರೀ ಆಚಾರ್ಯರ ಸಿದ್ಧಾಂತ ಮೋಕ್ಷ ಮಾರ್ಗಕ್ಕೆ ಕಾರಣವೆಂದು ತಿಳಿಯಬೇಕಾದರೆ, ಅವರ ಹಿಂದಿನ ಪರಮತೀಯರು ಒಡ್ಡಿದ ಅಪಯುಕ್ತಿಗಳು ಎಂಥವು ? ಅವು ಹೇಗೆ ದೂಷಿತವಾದ ಅಪಮಾರ್ಗ ಅಂಥವರ ಸಿದ್ಧಾಂತ ಅಧ್ಯಯನದಿಂದ ತಮಸ್ಸೇ ಫಲವೆಂದು ತೋರಿಸಿ ಸನ್ಮಾರ್ಗ ದೀಪಕರಾಗಿ ಭಾಷ್ಯಕ್ಕೆ ಮರು ವ್ಯಾಖ್ಯಾನ ತಾವೇ ಬರೆದರು. ತಮ್ಮ ಸಿದ್ಧಾಂತದಲ್ಲಿ ಆದರ ಆಸಕ್ತಿ, ಶ್ರದ್ಧೆ ಉದಯಿಸಬೇಕಾದರೆ ಶ್ರೀ ಅನುವ್ಯಾಖ್ಯಾನಕ್ಕೆ ಟೀಕಾ ರೂಪವಾದದ್ದೇ **ಶ್ರೀಮನ್ನ್ಯಾಯಸುಧಾಧ್ಯಯನ** ಮಾಡಿದ ನಂತರ ಮನಸ್ಸು ಹೊಯ್ದಾಡದೆ ನಿಶ್ಚಿತ ಬುದ್ಧಿ ಉಳ್ಳವರಾಗಲು ಉಪಯೋಗವಾಗುವುದೇ ಶ್ರೀಮನ್ನ್ಯಾಯಸುಧಾದ ವೈಶಿಷ್ಟ್ಯತೆ, ಉತ್ತಮತೆ ಎಂಬುದನ್ನು ತಿಳಿಯಬೇಕು.

ಶ್ರೀಮನ್ನ್ಯಾಯಸುಧಾ ಒಂದು ಉತ್ಕೃಷ್ಟ – ಮಂಗಳದಾಯಕ ಗ್ರಂಥ ಇದರ ಅಧ್ಯಯನದಿಂದ ಶ್ರೀ ಲಕ್ಷ್ಮೀದೇವಿಯ ಕೃಪಾಕಟಾಕ್ಷವಾಗುವುದು. ಶ್ರೀ ವಾದಿರಾಜ ಪೂಜ್ಯಚರಣರು ಸುಧಾಮಂಗಳ ಸಮಯದಲ್ಲಿ ಹೀಗೆ ತಿಳಿಸಿದ್ದಾರೆ. **''ಆದ್ಯಂತಯೋಃ ಶ್ರೀಶಬ್ದಯುಕ್ತತ್ವಾತ್ ಶ್ರೀಕಾರೋಯಂ ಗ್ರಂಥಃ । ಅತ್ರ ವಯಮೇವ ಸಾಕ್ಷಿಣಃ''** ಶ್ರೀಸುಧಾ ಆದ್ಯಂತದಲ್ಲಿ ಲಕ್ಷ್ಮೀ ಶಬ್ದ ಪ್ರಯೋಗವಿರುವುದರಿಂದ ಈ ಗ್ರಂಥವನ್ನು ಭಕ್ತಿ ಶ್ರದ್ಧೆಯಿಂದ ಅಧ್ಯಯನ ಮಾಡಿದವರಿಗೆ ಶ್ರೀ ರಮಾದೇವಿಯ ಪೂರ್ಣಾನುಗ್ರಹವಾಗುವುದು. ಈ ವಿಷಯದಲ್ಲಿ ನಾವೇ ಸಾಕ್ಷಿಗಳಾಗಿದ್ದೇವೆ. ಎಂದು ಶ್ರೀ ರಾಜರು ವರ್ಣಿಸಿರುತ್ತಾರೆ.



**ಹರಿಃ ಓಂ**

**ಶ್ರೀ ಮನ್ಯಾಯಸುಧಾ ಸೇವ್ಯಾ ಭವತಾಪಮುಮುಕ್ಷುಭಿಃ ।**
**ಜಯತೀರ್ಥ ಮುನೀಂದ್ರೇಣ ದತ್ತಾ ವಿಬುಧ ತುಷ್ಟಯೇ ॥**

**ಅನುವ್ಯಾಖ್ಯಾನ ಮಂಗಳಾಚರಣೆ ಶ್ಲೋಕ**

**ನಾರಾಯಣಂ ನಿಖಿಲ ಪೂರ್ಣ ಗುಣೈಕದೇಹಂ**
**ನಿರ್ದೋಷಮಾಪ್ಯತಮಂ ಅಖಿಲೈಸ್ಸುವಾಕ್ಯೈಃ ॥**
**ಅಸ್ಯೋದ್ಭವಾದಿದಂ ಅಶೇಷ ವಿಶೇಷತೋಪಿ**
**ವಂದ್ಯಂ ಸದಾ ಪ್ರಿಯತಮಂ ಮಮಸನ್ನಮಾಮಿ ॥**

ಜ್ಞಾನಾನಂದ ಅನಂತ ಕಲ್ಯಾಣ ಗುಣಗಳೇ ಸರ್ವದಾ ಪರಿಪೂರ್ಣವಾದ ದೇಹಯುಕ್ತವಾಗಿರುವ; ಯಾವ ರೀತಿಯ ದೋಷವೇ ಇಲ್ಲದ, ತ್ರಿವಿಧ ಪ್ರಮಾಣಗಳಿಂದಲೇ ತಿಳಿಯಲ್ಪಡುವವನು; ಪ್ರತ್ಯಕ್ಷವಾಗಿ ಕಾಣುವ ಜಗತ್ತಿಗೆ ಕಾರಣೀಭೂತನಾದವನು; ಅಸಾಧಾರಣವಾದ ಧರ್ಮಗಳಿಂದ ನಮಸ್ಕಾರಕ್ಕೆ ಅರ್ಹನಾದವನು; ಶ್ರೀ ರಮಾಬ್ರಹ್ಮಾದಿಗಳಿಂದ ವಂದ್ಯನು; ನಿರ್ದುಷ್ಟವಾದ ವೇದಾದಿಗಳಲ್ಲಿ ಪ್ರತಿಪಾದ್ಯನು; ನನಗೆ ಅತ್ಯಂತ ಪ್ರಿಯತಮನಾದ ಶ್ರೀಮನ್ನಾರಾಯಣನನ್ನು ವಿಶೇಷ ಭಕ್ತಿಯಿಂದ ನಮಸ್ಕಾರ ಮಾಡುವೆನು.

**ಅನ್ವಯಃ**

ಸದಾವಂದ್ಯಂ ಮಮ ಪ್ರಿಯತಮಂ ನಾರಾಯಣಂ ಸನ್ನಮಾಮಿ

(೧) ನಿಖಿಲ ಪೂರ್ಣ ಗುಣೈಕ ದೇಹಂ

(೨) ನಿರ್ದೋಷಂ

(೩) ಅಸ್ಯ ಉದ್ಭವಾದಿದಂ

(೪) ಅಖಿಲೈಸ್ಸುವಾಕ್ಯೈಃ ಆಪ್ಯತಮಂ ಸನ್ನಮಾಮಿ

ಬ್ರಹ್ಮಸೂತ್ರದ (ಬ್ರಹ್ಮಮೀಮಾಂಸಾ) ನಾಲ್ಕು ಅಧ್ಯಾಯಗಳ ಸಂಗ್ರಹ ನಿರೂಪವಾಗಿ ಈ ಶ್ಲೋಕದಿಂದ ತಿಳಿಸುತ್ತಾರೆ.

(ಎ) ''ನಿಖಿಲ'' ಎಂಬುದರಿಂದ ಪ್ರಥಮಾಧ್ಯಾಯವಾದ ಸಮನ್ವಯಾಧ್ಯಾಯದ ಸಾರ.

(ಬಿ) 'ನಿರ್ದೋಷಂ' ಎಂದು ಎರಡನೇ ಅಧ್ಯಾಯ ಅವಿರೋಧ್ಯಾಯದ ಸಂಗ್ರಹ.

(ಸಿ) ''ಅಸ್ಯೋದ್ಭವಾದಿದಂ'' ''ಅಖಿಲೈಸ್ಸುವಾಕ್ಯೈಃ'' ಎಂಬುದರಿಂದ ಮೂರನೇ ಅಧ್ಯಾಯ ಸಾಧನಾಧ್ಯಾಯದ ಸಾರ.

(ಡಿ) ''ಮಮ ಆಪ್ಯತಮಂ'' ಎನ್ನುವುದರಿಂದ ನಾಲ್ಕನೇ ಅಧ್ಯಾಯ ''ಫಲಾದ್ಯಾಯದ ಸಂಕ್ಷೇಪ''

ಇಲ್ಲಿ ''ಸದಾ ಮಮಆಪ್ಯತಮಂ'' ನನಗೆ ಸದಾಕಾಲದಲ್ಲೂ ಪರಮಪ್ರೇಮಕ್ಕೆ ಕಾರಣನಾಗಿದ್ದಾನೆ ಮತ್ತು ''ಸದಾಸನ್ನಮಾಮಿ'' ನಿರಂತರವಾಗಿ (ಅವಿರೋಹಿತವಾಗಿ) ನಾನು ಅವನಿಗೆ ಚೆನ್ನಾಗಿ (ಭಕ್ತಿಪೂರ್ವಕವಾಗಿ) ನಮಸ್ಕಾರ ಮಾಡುತ್ತೇನೆ.

"ಸದಾ" ಪದವನ್ನು ಎರಡು ಸಲ ಅನ್ವಯಿಸಬೇಕು.

ಶ್ರೀಮದಾಚಾರ್ಯರು **"ಅನುವ್ಯಾಖ್ಯಾನ"**ವೆಂಬ ಗ್ರಂಥ ರಚಿಸಿದರು. ಇದಕ್ಕೆ ಶ್ರೀಮಜ್ಜಯತೀರ್ಥರು **"ಶ್ರೀ ಮನ್ನ್ಯಾಯಸುಧಾ"** ಎಂಬ ಟೀಕಾ ವ್ಯಾಖ್ಯಾನ ಬರೆದರು. ಅನುವ್ಯಾಖ್ಯಾನವು ಬ್ರಹ್ಮಸೂತ್ರಭಾಷ್ಯದಲ್ಲಿ ಹಾಸು ಹೊಕ್ಕಾಗಿ (ಒಳಗೆ ಇಳಿದು) ಅಡಗಿರುವ ಯುಕ್ತಿಗಳೆಂಬ (Reasoning) ಮಣಿಗಳನ್ನು ಹೊರತೆಗೆದ ಒಂದು ನ್ಯಾಯ ಗ್ರಂಥರಚನೆ. ಇದರಲ್ಲಿ ಪರಮತೀಯರಾದವರು ವೇದ ಬ್ರಹ್ಮಮೀಮಾಂಸಾ ಶಾಸ್ತ್ರಗಳಿಗೆ ತಮಗೆ ತೋಚಿದ ಪ್ರಮಾಣ ರಹಿತವಾಗಿ, ಸ್ವಕಲ್ಪನಾ ಶಕ್ತಿಯಿಂದ ಯಥಾವತ್ತಾದ ತತ್ವವನ್ನು ಮರೆಮಾಚಿ ನಿಜವಾದ ಭಗವಂತನ ವಿಷಯಕ ಜ್ಞಾನ, ತನ್ಮೂಲಕ ಮೋಕ್ಷಪ್ರಾಪ್ತಿ ಆಗುವುದರಿಂದ ಸಜ್ಜನರು ವಂಚಿತರಾದಾಗ ಶ್ರೀಮದಾನಂದತೀರ್ಥರು ವೇದವ್ಯಾಸರಿಂದ ಆಜ್ಞಪ್ತರಾಗಿ ಅವರ ಅಭಿಪ್ರಾಯಕ್ಕೆ ತಕ್ಕಂತೆ ಭಾಷ್ಯ ಬರೆದರು. ಈ ಗ್ರಂಥದಲ್ಲಿ ಎಲ್ಲಾ ವಿಷಯಗಳು ಯಥಾವತ್ತಾಗಿ ತಿಳಿಸಿದ್ದರೂ ಶಿಷ್ಯರ ಅಪೇಕ್ಷೆ ಪ್ರಾರ್ಥನಾನುಸಾರ ಪರಮತೀಯರ ಅನ್ಯಥಾರ್ಥಗಳು ಏನೆಂಬುದನ್ನು ತಿಳಿಸಿ, ಅದರ ವಿಮರ್ಶೆ ಮಾಡಿ ಅವರ ಮತಗಳಲ್ಲಿರುವ ದೋಷಗಳನ್ನು ತೋರಿಸಿ, ಖಂಡಿಸಿರುವ ಗ್ರಂಥವೇ ಅನುವ್ಯಾಖ್ಯಾನವು. ನಂತರ ಶ್ರೀಮಜ್ಜಯತೀರ್ಥರು ಈ ಅನುವ್ಯಾಖ್ಯಾನಕ್ಕೆ ವಿಸ್ತಾರವಾಗಿರುವ ಟೀಕೆಯು **"ಶ್ರೀಮನ್ನ್ಯಾಯಸುಧಾ"**.

ಶ್ರೀಮನ್ನ್ಯಾಯಸುಧಾದಲ್ಲಿ ಜಯತೀರ್ಥರು ಅನ್ಯ ಮತೀಯರ ಸಿದ್ಧಾಂತಗಳನ್ನು ವಿವರವಾಗಿ ಅನುವಾದ ಮಾಡಿ ಅವರ ಮತವು ದುಷ್ಟ ಹೇಗೆಂಬುದನ್ನು ತೋರಿಸಿ ಆಚಾರ್ಯರ ತತ್ತ್ವವೇ ವೇದಸಮ್ಮತವೆಂದು ಲೋಕದಲ್ಲಿ ಮಧ್ವಮತ ಪತಾಕೆಯನ್ನು ಸ್ಥಾಪಿಸಿದ ಮಹೋನ್ನತ ಕೃತಿಯು.

**"ಯೇನಾಗಾಹಿ ಸಮಸ್ತಶಾಸ್ತ್ರ ಪೃಥುನಾ ರತ್ನಾಕರೋ ಲೀಲಯಾ"**
**"ಯೇನಾ ಖಂಡಿಕುವಾದಿಸುಭಟ ಸ್ತೋಮೋವಚಸ್ಸಾಯ ಕೈಃ"**
**"ಯೇನಾ ಸ್ಥಾಪಿತ ಮಧ್ವವಿಜಯ ಸ್ತಂಭೋ ಧರಾಮಂಡಲೇ"**
**"ತಂಸೇವ್ಯೇ ಜಯತೀರ್ಥ ವೀರ ಮನಿಶಂ ಮಧ್ವಾಖ್ಯ ರಾಜಾ ಧೃತಂ"**

ಎಂದು ವರ್ಣಿಸಲಾಗಿದೆ.

ಇದು ಸಂಸ್ಕೃತ ಧಾರ್ಮಿಕ ವಾಂಜ್ಞಯದಲ್ಲಿ ಅತಿ ಉತ್ತಮ ಕೃತಿ. ಈ ಗ್ರಂಥದಲ್ಲಿ ರಾಮಾಯಣ ಭಾರತಾದಿಗಳಲ್ಲಿರುವಂತೆ ಕತೆಗಳಿಲ್ಲ. ಇಲ್ಲಿ ಕೇವಲ ಜಟಿಲವಾದ ತರ್ಕ(ಪೂರ್ವಪಕ್ಷ ಆಕ್ಷೇಪ. ಅದಕ್ಕೆ ತಕ್ಕ ಉತ್ತರ ಸಮಾಧಾನ ಸ್ವಸಿದ್ಧಾಂತ ನಿರೂಪಣೆ, ಅಮೋಘ ಅದ್ವಿತೀಯ.[೧]

---

[೧] ಭಗವಂತನ ಕಥೆ ಇಲ್ಲ ಅಂತ ಹೇಳುತ್ತೀರಿ, ಅಂದ ಮೇಲೆ ಶ್ರೀ ಸುಧಾದ ವೈಶಿಷ್ಟ್ಯತೆ, ಉತ್ತಮತೆ ಏನು ? ಎಂಬ ಪ್ರಶ್ನೆ ಬರುವುದು ಸಹಜ. ಮೇಲೆ ತಿಳಿಸಿದಂತೆ ಶ್ರೀ ಮದಾಚಾರ್ಯರು ವ್ಯಾಸಾಜ್ಞಾ ಪ್ರಕಾರ ಬ್ರಹ್ಮಸೂತ್ರಗಳಿಗೆ ಸಪ್ರಮಾಣಿಕವಾಗಿ ರಚಿಸಿದ ವ್ಯಾಖ್ಯಾನವೇ **ಶ್ರೀಮದ್ಬ್ರಹ್ಮಸೂತ್ರಭಾಷ್ಯ.** ಆದರೆ ಈ ಗ್ರಂಥದಲ್ಲಿ ಪರಮತಗಳಲ್ಲಿ ತಿಳಿಸಿರುವ ಸಿದ್ಧಾಂತವು ದುಷ್ಟವು ಹೇಗೆ ಎಂದು ಅನುವಾದ ಮಾಡಿ ಅದರ ನಿರಸನವೇ ನ್ಯಾಯ ಯುಕ್ತಿಗಳಿಂದ ರಚಿಸಿರುವುದು ಅನುವ್ಯಾಖ್ಯಾನವು. ಈ ಗ್ರಂಥಕ್ಕೆ ಶ್ರೀಮಜ್ಜಯತೀರ್ಥರು ವಿಶಿಷ್ಟವಾದ ಟೀಕಾ **ಶ್ರೀಮನ್ನ್ಯಾಯಸುಧಾ** ಎಂಬುದನ್ನು ತಿಳಿಯಬೇಕು.



ಈ ಕೃತಿಗೆ ಶ್ರೀ ಮನ್ಮಂತ್ರಾಲಯ ಪ್ರಭುಗಳು **ಶ್ರೀ ಪರಿಮಳ** ಎಂಬ ಉತ್ಕೃಷ್ಟ ಟಿಪ್ಪಣಿ ಬರೆದರು. ಪರಿಮಳದ ವೈಶಿಷ್ಟ್ಯತೆ ಪ್ರಶಂಸೆ, **ಶ್ರೀ ವಾದೀಂದ್ರ ತೀರ್ಥರು ಕೊಂಡಾಡಿರುತ್ತಾರೆ.**

**ಧೀರಶ್ರೀ ರಾಘವೇಂದ್ರ ತ್ವದತುಲ ರಸನಾ ರಂಗ ನೃತ್ಯತ್ ಸ್ವಯಂಭೂಯೋಷಾ**
**ಧಮ್ಮಿಲ್ಲ ಭಾರ ಸ್ಲತ ಕುಸುಮ ತತೀ ಸದ್ಗಿರಾ ಸಂಗಿರಾಮಹಃ।**
**ಯಾಭಿಃ ಸಮ್ಮಿಶ್ರಿತಾಭಿಃ ನಿರವಧಿ ವಸುಧಾ ಸಾಸುಧಾಪಿ**
**ಕ್ಷೋಣೇ ಗೀರ್ವಾಣ ಗಮ್ಯಂ ಪರಿಮಳ ಮತುಲಂ ಸಾಂಪ್ರದಂ ಸಂಪ್ರಪೇದೇ ॥**

ಶ್ರೀ ಮನ್ನ್ಯಾಯಸುಧಾದಲ್ಲಿ ಪರಮತಗಳನ್ನು ಅನುವಾದಿಸಿ ಅವರ ಮತಗಳು ಎಷ್ಟು ದೋಷಭರಿತ ಎಂದು ತೋರಿಸಿ ನಿರಸನ ಮಾಡಿರುತ್ತಾರೆ. ಆ ಪರಮತಗಳು ಯಾವುದೆಂದು ತಿಳಿಯಬೇಕು:–

(೧) ಶ್ರೀ ಶಂಕರಾಚಾರ್ಯರ (ಭಾಷ್ಯ) ಅದ್ವೈತ ಮಾಯವಾದ.
(೨) ವಿಶಿಷ್ಟಾದ್ವೈತ
(೩) ಅದ್ವೈತಿಗಳಲ್ಲಿ ಪ್ರಾಭಾಕರರು ಭಾಮತಿ
(೪) ನ್ಯಾಯ ನೈಯ್ಯಾಯಿಕರು
(೫) ವೈಶೇಶಿಷಿಕರು
(೬) ಶಕ್ತಿವಾದಿಗಳು
(೭) ಶಕ್ತಿ ವಿಶಿಷ್ಟಾದ್ವೈತ ಮತ(ವೀರಶೈವ)
(೮) ಅವೈದಿಕ ಮತಗಳಾದ ಜೈನ, ಬೌದ್ಧ, ಚಾರುವಾಕ, ಶೂನ್ಯವಾದಿಗಳು. ಹೆಚ್ಚಾಗಿ ಈ ಮತಗಳು ಎಲ್ಲಾ ರೀತಿಯ ಅಪ್ರಮಾಣ, ವೇದವಿರುದ್ಧ, ದೂಷಗಳಿಂದ ತುಂಬಿದೆ ಆದರೆ ವೈದೀಕರೆಂದು ಹೇಳಿಕೊಳ್ಳುವ ಮಾಯಾವಾದವನ್ನು ಹೆಚ್ಚಾಗಿ ಖಂಡಿಸಿರುವ ವೈಖರಿ ಅತ್ಯಂತ ಅದ್ಭುತ.

ಶ್ರೀಮನ್ನ್ಯಾಯಸುಧಾದ ಆರಂಭದಲ್ಲಿ ಶ್ರೀಮಜ್ಜಯತೀರ್ಥರು ಭಗವನ್ನಮನ ರೂಪ ಮಂಗಳ ಶ್ಲೋಕ.

(೧) **ಶ್ರೀಯಃ ಪತ್ಯೇನಿತ್ಯಾಗಣಿತ ಗುಣ ಮಾಣಿಕ್ಯ ವಿಶದ ।**
**ಪ್ರಜಾ ಜಾಲೋಲ್ಲಾಸೋಪಹತ ಸಕಲಾವದ್ಯತಮಸೇ ।**
**ಜಗಜ್ಜನ್ಮ ಸ್ಥೇಮ ಪ್ರಲಯ ರಚನಾ ಶೀಲ ವಪುಷೇ**
**ನಮೋಶೇಷಾಯ್ನಾಯ ಸ್ಮೃತಿ ಹೃದಯದೀಪ್ತಾಯ ಹರಯೇ ॥**

(೨) <u>ಶ್ರೀ ವೇದವ್ಯಾಸರಿಗೆ ನಮನ</u>.

**ಯೇನ ಪ್ರಾದುರಭಾವಿ ಭೂಮಿ ವಲಯೇ ವ್ಯಸ್ತಾರಿ ಗೋಸಂತತಿಃ॥**
**ಪ್ರಾಬೋಧೀಶೃತಿಪಂಕಜಂ ಕರುಣಯಾ ಪ್ರಾಕಾಶಿತತ್ವಂ ಪರಂ॥**
**ಧ್ವಾಂತಂ ಧ್ವಂಸಮನಾಯ ಸಾಧು ನಿಕರಾಶ್ಚಾಕಾರ ಸನ್ಮಾರ್ಗಗಃ॥**
**ತೇನ ವ್ಯಾಸದಿ ವಾಕರೇಣ ಸತತಂ ಮಾತ್ಯಾಜೀ ಮೇ ಮಾನಸಂ।**

(೩) <u>ತಮಗೆ ಪರಮ ಗುರುಗಳು – ಜಗದ್ಗುರುಗಳಾದ ಶ್ರೀ ಮದಾನಂದತೀರ್ಥರನ್ನು ಅನುಮಾನ ಸಾಮ್ಯದಿಂದ ಸ್ತೋತ್ರ ಮಾಡುತ್ತಾರೆ.</u>

**ವ್ಯಾಪ್ತಿರ್ಯಸ್ಯ ನಿಜೇ ನಿಜೇನಮಹಸಾ ಪಕ್ಷೇಸಪಕ್ಷೇ ಸ್ಥಿತಿಃ ॥**
**ವ್ಯಾವೃತ್ತಿಶ್ಚ ವಿಪಕ್ಷತೋಥ ವಿಷಯೇ ಸಕ್ತಿರ್ನ ವೈ ಬಾಧತೇ ॥**
**ನೈವಾಸ್ತಿ ಪ್ರತಿಪಕ್ಷ ಯುಕ್ತಿ ರತುಲಂ ಶುದ್ಧಂ ಪ್ರಮಾಣಂ ಸ ಮೇ॥**
**ಭೂಯಾತ್ ತತ್ವವಿನಿರ್ಣಯಾಯ ಭಗವಾನ್ ಆನಂದತೀರ್ಥೋ ಮುನಿಃ ॥**

**(೪)** <u>ವಾಗಭಿಮಾನಿ ಭಾರತೀದೇವಿಯರ ಸ್ತೋತ್ರ</u>

**ಭವತಿಯದನು ಭಾವಾದೇಡಮೂಕೋಪಿ ವಾಗ್ಮೀ**
**ಜಡಮತಿರಪಿಜಂತುಃ ಜಾಯತೇ ಪ್ರಾಜ್ಞ ಮೌಲಿಃ ।**
**ಸಕಲ ವಚನ ಚೇತೋ ದೇವತಾ ಭಾರತೀ ಸಾ ।**
**ಮಮ ವಚಿಸಿ ನಿಧತ್ತಾಂ ಸನ್ನಿಧಿಂ ಮಾನಸೇಚ॥**

(೫) ಆದಿ ಟೀಕಾಕಾರರೆಂದು ಪ್ರಸಿದ್ಧರಾದ ಅನುವ್ಯಾಖ್ಯಾನಕ್ಕೆ ಪ್ರಥಮ ವ್ಯಾಖ್ಯಾನ **''ಸನ್ನ್ಯಾಯ ರತ್ನಾವಳಿ''** <u>ಕರ್ತೃಗಳಾದ, ಶ್ರೀ ಪದ್ಮನಾಭ ತೀರ್ಥರಿಗೆ ವಂದಿಸುತ್ತಾರೆ.</u>

**ರಮಾ ನಿವಾಸೋಚಿತ ವಾಸ ಭೂಮಿಃ**
**ಸನ್ನ್ಯಾಯ ರಥ್ನಾವಳಿ ಜನ್ಮ ಭೂಮಿಃ ।**
**ವೈರಾಗ್ಯ ಭಾಗ್ಯೋ ಮಮ ಪದ್ಮನಾಭ ।**
**ತೀರ್ಥಾಮೃತಾಬ್ಧಿಃ ಭವತಾದ್ವಿಭೂತ್ಯೈ ॥**

(೬) <u>ತಮ್ಮ ಗುರುಗಳಾದ ಶ್ರೀಮದಕ್ಷೋಭ್ಯತೀರ್ಥರನ್ನು ಸ್ತೋತ್ರ ಮಾಡುತ್ತಾರೆ.</u>

**ಪದ ವಾಕ್ಯ ಪ್ರಮಾಣ ಜ್ಞಾನ್ ಪ್ರತಿಪಾದಿಮದಚ್ಛಿದಃ ।**
**ಶ್ರೀಮದಕ್ಷೋಭ್ಯತೀರ್ಥಾಖ್ಯಾನ್ ಉಪತಿಷ್ಟೇ ಗುರೂನ್ಮಮ ॥**

(೭) <u>ಅನುವ್ಯಾಖ್ಯಾನಕ್ಕೆ ತಾವು ಟೀಕೆ ಬರೆಯುತ್ತೇವೆಂದು ಪ್ರತಿಜ್ಞೆ</u>

**ಶ್ರೀಮದಾನಂದತೀರ್ಥಾರ್ಯ ಸನ್ಮನಸಿ ಸರಸೀಭುವಿ ॥**
**ಅನುವ್ಯಾಖ್ಯಾನ ನಲಿನೇ ಚಂಚರೀಕತಿ ಮೇಮನಃ ॥**

ಶ್ರೀಮದಾನಂದತೀರ್ಥರ ಮನಸ್ಸೆಂಬುವ ಸರೋವರದಲ್ಲಿ ಉದ್ಭವಿಸಿದಂತಿರುವ ಅನುವ್ಯಾಖ್ಯಾನವೆಂಬ ಕಮಲದಲ್ಲಿರುವ ಮಕರಂದವನ್ನು ಹೀರಲು ಭ್ರಮರದಂತಿರುವ ನನ್ನ ಮನಸ್ಸು ಪೂರ್ಣವಾಗಿ ಕುಡಿಯಲು ಆಗದೆ ಇರುವೆನು. ಅಂದರೆ ಅನುವ್ಯಾಖ್ಯಾನದಲ್ಲಿರುವ (ಅಡಗಿರುವ) ಯುಕ್ತಿಗಳಿಗೆ ಎಷ್ಟೆಷ್ಟು ರೀತಿಯಾಗಿ ವ್ಯಾಖ್ಯಾನಿಸಿದರೂ ತೃಪ್ತಿ ಕಾಣದೇ ಮತ್ತೆ ಮತ್ತೆ ಆಚಾರ್ಯರ ಸತ್ಸಿದ್ಧಾಂತ ರಹಸ್ಯ ಸ್ವಾರಸ್ಯಗಳನ್ನು ಅರ್ಥೈಸಿದರೂ ಇನ್ನಷ್ಟೂ ಅರ್ಥಗಳು ಕಂಡುಬರುವುದಾಗಿ ವರ್ಣಿಸಿರುತ್ತಾರೆ.



(೮) ಅನುವ್ಯಾಖ್ಯಾನಕ್ಕೆ ಟೀಕೆ (ಮರುವ್ಯಾಖ್ಯಾನ) ಬರೆಯುವಷ್ಟು ಪಾಂಡಿತ್ಯವಿಲ್ಲವೆಂದು ಆದರೂ ಶ್ರೀಮನ್ನ್ಯಾಯಸುಧಾ ಕರ್ತೃಗಳೆಂದು ತಮಗೆ ಲಭಿಸುವ ಗೌರವ, ಮಾನ್ಯತೆ ಶ್ರೀಮದಾನಂದತೀರ್ಥರು ತಮ್ಮ ಮೇಲೆ ಕರುಣಾಪೂರಿತ ಅನುಗ್ರಹದಿಂದಲೇ ತಾವು ಮಾನ್ಯರಾಗಿದ್ದೇವೆಂದು ವಿನಯದಿಂದ ಹೇಳಿಕೊಳ್ಳುತ್ತಾರೆ.

**ನಶಬ್ದಾದೌ ಗಾಢಾಃ ನಚ ನಿಗಮ ಚರ್ಚಾಸುಚತುರಾಃ**
**ನಚನ್ಯಾಯೋ ಪ್ರೌಡಾಃ ನಚವಿದಿತ ವೇದ್ಯಾಃ ।**
**ಪರಂ ಶ್ರೀಮತ್ಪೂರ್ಣಪ್ರಮತಿ ಗುರುಕಾರುಣ್ಯ ಸರಣೀಂ**
**ಪ್ರಪನ್ನಾಃ ಮಾನ್ಯಾಃಸ್ಮಃ ಕಿಮಪಿವದಂತೋಪಿ ಮಹತಾಂ॥**

<u>ಶ್ರೀಮದ್ರಾಘವೇಂದ್ರ ಗುರುರಾಜರ ''ಶ್ರೀಪರಿಮಳ''ದ ಮಂಗಳ ಶ್ಲೋಕ</u>

**ಪೂರ್ಣಾಗಣ್ಯ ಗುಣೋದಾರ ಮೂರ್ತಯೇ ಪುಣ್ಯ ಕೀರ್ತಯೇ**
**ನಮೋ ಶ್ರೀ ಪತಯೇ ಭಕ್ತ ದತ್ತ ಸ್ವಾನಂದ ಮೂರ್ತಯೇ**
**ಪೂರ್ಣಾ ಗಣ್ಯ ಗುಣೋದಾರ ನಿತ್ಯ ಸುಂದರ ಮೂರ್ತಿನೇ**
**ನಮಃ ಶ್ರೀ ಬ್ರಹ್ಮವೀಂದ್ರ ಪೂರ್ವೈಃ ಈಡ್ಯ ಕೀರ್ತಿನೇ ಬ್ರಹ್ಮಣೇ ನಮಃ ।**

<u>ವಾಯುವ್ಯ ವಾತಾರರಾದ ಶ್ರೀ ಮದಾಚಾರ್ಯರಿಗೆ ನಮನವು</u>

**ವಿಶ್ವಂ ಯಸ್ಯ ವಶೇ ಸರ್ವಮನಿಶಂ ಶಂಕರಾದಿಕಂ ।**
**ತಸ್ಯ ವಾಯೋ ಸ್ತೃತೀ ಯಾಂಶಂ ಆಶ್ರಯೇ ತಮ ವಾಪ್ತಯೇ ।**

<u>ಶ್ರೀ ಸುಧಾಕಾರರಾದ ಜಯತೀರ್ಥರಿಗೆ ನಮನ</u>

**ಸತ್ಪದ್ಯ ಬಂಧವೋಯಸ್ಯ ಗಾವೋ ವಿಶ್ವ ತಮೋ ನುದಃ**
**ಸಸ್ಯಾತ್ ತತ್ವ ಪ್ರಕಾಶಾಯ ಜಯತೀರ್ಥರವಿರ್ಮಮ॥**

<u>ಶ್ರೀಮನ್ನ್ಯಾಯಸುಧಾಕ್ಕೆ – ತಾವು ಟಿಪ್ಪಣಿ ಬರೆಯುವುದಕ್ಕಾಗಿ ಪ್ರತಿಜ್ಞೆ</u>

**ಅಸ್ಮತ್ ದೇಶಿಕ ಪಾದಾನಾಂ ಪ್ರಣಮ್ಯ ಚರಣಾಂಬುಜಂ**
**ಶ್ರೀಮನ್ಯಾಯಸುಧಾ ವಾಕ್ಯ ವ್ಯಾಖ್ಯಾಂ ಕುರ್ಯೇ ಯಥಾಮತಿ ॥**

<u>ಈ ಗ್ರಂಥವನ್ನು **''ನ್ಯಾಯಸುಧಾ''** ಅಂತ ಏಕೆ ಹೆಸರಿಟ್ಟರು.</u>

ನ್ಯಾಯ ಅಂದರೆ (ಲೋಕದೃಷ್ಟಿಯಲ್ಲಿ Justice ಅಂತ ಅರ್ಥವಿದೆ. ಆದರೆ ಇಲ್ಲಿ ನ್ಯಾಯ ಅಂದರೆ A Science of Logic ಅಥವಾ Logical Philosophy. ಪ್ರಾಮಾಣಿಕವಾಗಿ ತರ್ಕಿಸುವುದೆಂಬ ಅರ್ಥದಲ್ಲಿದೆ.

ಈ ಸುಧಾ ಗ್ರಂಥದಲ್ಲಿ ನ್ಯಾಯ ತರ್ಕದಿಂದ ಕೂಡಿದ ಯುಕ್ತಿ Inference / Reasoning / Argument ಗಳಿಂದ ಕೂಡಿದೆ ಎಂದು ತಿಳಿಯಬೇಕು.

ಶ್ರೀ ಜಯತೀರ್ಥರು ತಮ್ಮ ಗ್ರಂಥವನ್ನು **"ವಿಷಮ ಪದ ವಾಕ್ಯಾರ್ಥ ವಿವೃತ್ತಿ"** ಎಂದು ಕರೆದಿದ್ದಾರೆ.

ಶ್ರೀಮಜ್ಜಯತೀರ್ಥರು ಪ್ರಾರಂಭದಲ್ಲಿ (೩ನೇ ಶ್ಲೋಕ ನೋಡಿ) ಶ್ರೀಮದಾಚಾರ್ಯರನ್ನು ಅನುಮಾನಸಾಮ್ಯದಿಂದ ಸ್ತೋತ್ರ ಮಾಡಿ ಇರುತ್ತಾರೆ. ಇದರ ವಿವರಣೆ ಹೀಗೆ ತಿಳಿಯಬೇಕು. **ಅನುಮಾನ ಹಾಗಂದರೇನು ತಿಳಿಯೋಣ.**

ಮಾನ ಅಂದರೆ ಪ್ರಮಾಣ (Epistemology and ontology) ಅದು ಯಾವುದಾದರೊಂದರ ಮೇಲೆ ಆಧರಿಸಿರಬೇಕು. ಅನುಮಾನ ಅಂದರೆ ಸಂಶಯ– Doubt ಅನ್ನುವ ಅರ್ಥದಲ್ಲಿ ಬಳಸಲಾಗುವುದಿಲ್ಲ. ಶಾಸ್ತ್ರ ಪರಿಭಾಷೆಯಲ್ಲಿ ಅನುಮಾನ ಎಂದರೆ "ಅನುಸೃತ್ಯ ಮಾನಂ" ಎಂದು ಹೇಳಲಾಗಿದೆ. ಒಂದು ಸಿದ್ಧಾಂತವು ಸ್ಥಾಪಿತವಾಗಬೇಕಿದ್ದರೆ **"ಮಾನಾಧೀನಾಮೇಯಸಿದ್ಧಿಃ"** ಎಂಬಂತೆ (ಪ್ರಮೇಯವು ಪ್ರಸಿದ್ಧವಾಗಲು) ಆ ಪ್ರಮೇಯವು ಪ್ರಾಮಾಣಿಕವಾಗಿರಬೇಕು. ಅಂದರೆ ಆ ಅನುಮಾನವು ಸ್ವತಃ ಒಂದು ಸ್ವತಂತ್ರ ಶಾಸ್ತ್ರ ಆಗುವುದಿಲ್ಲ. ಅದು ಯಾವುದಾದರೊಂದು ವಿಶ್ವಾಸಾರ್ಹ ಗ್ರಂಥ, ವ್ಯಕ್ತಿ, ಅಥವಾ ಇಂದ್ರಿಯಗಳಿಂದ ತಿಳಿಯುವಂತಾಗಿರಬೇಕು.

ಹಾಗಾದರೆ ಪ್ರಮಾಣಗಳು ಎಷ್ಟು ಅಂತ ಕೇಳಿದರೆ ಶಾಸ್ತ್ರಕಾರರು ಮೂರು ವಿಧ ಅಂತ ಉತ್ತರಿಸುತ್ತಾರೆ. (೧) ಪ್ರತ್ಯಕ್ಷ (೨) ಅನುಮಾನ (೩) ಆಗಮವೆಂದು. (೧) ಪ್ರತ್ಯಕ್ಷ ಎಂದರೆ ಕಣ್ಣಿಗೆ ಕಾಣಿಸುವುದೆಂದೇ ಅಲ್ಲ. ಇಂದ್ರಿಯಗಳಿಂದ ವಿಷಯ ಜ್ಞಾನ ಹೊಂದುವುದು. ಕಣ್ಣು, ಕಿವಿ, ಮೂಗು, ನಾಲಿಗೆ ಮತ್ತು ಚರ್ಮ ಇವನ್ನು ಪಂಚ ಜ್ಞಾನೇಂದ್ರಿಯಗಳೆಂದು ಎಲ್ಲರಿಗೂ ಗೊತ್ತು. ಆಗ ಪ್ರತ್ಯಕ್ಷ ಅಂದರೆ ಕಣ್ಣಿನಿಂದ ನೋಡಿ, ಕಿವಿಯಿಂದ ಕೇಳಿ, ಮೂಗಿನಿಂದ ವಾಸನೆ, ನಾಲಿಗೆಯಿಂದ ರುಚಿ ಮತ್ತು ಚರ್ಮದಿಂದ ಸ್ಪರ್ಶ ಜ್ಞಾನವು ಆಗುವುದು. ಇಂಥದ್ದು ಪ್ರತ್ಯಕ್ಷ ಪ್ರಮಾಣವೆನ್ನುತ್ತಾರೆ. ಪ್ರತ್ಯಕ್ಷ ಪ್ರಮಾಣವು ಪ್ರಬಲವಾದದ್ದು. ಇದರಿಂದ ವಿಷಯ ಜ್ಞಾನವು ಆಗಿದ್ದನ್ನು ಸುಳ್ಳೆಂದು ಹೇಳಲು ಬರುವುದಿಲ್ಲ. ಆದರೆ ಈ ಪ್ರತ್ಯಕ್ಷ ಪ್ರಮಾಣಕ್ಕೆ ಎಲ್ಲೆ ಮಿತಿ ಇದೆ. ಹೇಗೆಂದರೆ ಇಂದ್ರಿಯಗಳಿಂದ ಮಾತ್ರ ಗೋಚರವಾದದ್ದು ಸತ್ಯಜ್ಞಾನ. ಆದರೆ ಇಂದ್ರಿಯಗಳಿಂದಲೂ ತಿಳಿಯಲಾಗದ ವಿಷಯಗಳು ಇವೆ. ಅದನ್ನು ಇಂದ್ರಿಯಗಳಿಂದ ತಿಳಿಯಲಾಗುವುದಿಲ್ಲ. ಅದನ್ನು **ಅತೀಂದ್ರೀಯ ವಿಷಯ** ಜ್ಞಾನವೆನ್ನುತ್ತಾರೆ. ಉದಾಹರಣೆಗೆ ಸ್ವರ್ಗ, ನರಕ, ಪಾಪ ಪುಣ್ಯ, ದೇವರ ಅಸ್ತಿತ್ವ ಇತ್ಯಾದಿಗಳನ್ನು ಇಂದ್ರಿಯಗಳಿಂದ ತಿಳಿಯಲು ಆಗುವುದಿಲ್ಲ. ಅಂತಹ ಅಂತೀಂದ್ರೀಯವಾದ ವಿಷಯ ಜ್ಞಾನವು ಅನುಮಾನದಿಂದಲೂ ಆಗುವುದಿಲ್ಲ. ಇಂದ್ರಿಯಗಳಿಗೂ ಮೀರಿ ಇರುವ ವಸ್ತುವಿನ ಜ್ಞಾನ **ಶಾಸ್ತ್ರಗಳಿಂದಲೇ** ಸಾಧ್ಯ. ಇಂತಹ ಶಾಸ್ತ್ರಗಳನ್ನು ಆಗಮವೆಂದು ಕರೆಯಲ್ಪಟ್ಟಿದೆ.

(೨) ಆಗಮಗಳು ಯಾವುವು

ಆಗಮಗಳು ನಿರ್ದುಷ್ಟವಾದ ಪದಗಳ ಸಮೂಹ (ವಾಕ್ಯಗಳು) (ನಿರ್ದೋಷ ಶಬ್ದ



ಆಗಮ) ನಿಘಂಟುವಿನ ಪ್ರಕಾರ ಬರುವುದು (arrival - appearance) ಅಂತ ಆದರೆ ಶಾಸ್ತ್ರ ಭಾಷೆಯಲ್ಲಿ – ಪವಿತ್ರ ಶಾಸ್ತ್ರಗಳು, ವೇದಾದಿಗಳು ಇವುಗಳ ಅಧ್ಯಯನದಿಂದ ಸಮೀಚೀನ (ಸಮ್ಯಕ್)ವಾಗಿ ಭಗವಂತನ ವಿಷಯ ಜ್ಞಾನವಾಗುವುದು. ಆಸಮಂತಾತ್ + ಗಮ್ಯಂತೇತಿ ಆಗಮ:– ಗಮ್–ಗತಿ ಶಬ್ದಗಳಿಗೆ ಜ್ಞಾನವಾಚಕವೆಂದು ಅವನ ಗಮ್ಯಸ್ಥಾನವನ್ನು ಹೊಂದಿಸುವುದೆಂದೂ ಅರ್ಥವಿದೆ. ಅಂದರೆ ಇವುಗಳ ಅಧ್ಯಯನದಿಂದಲೇ ಪರಮಾತ್ಮನ ವಿಷಯಜ್ಞಾನ ಆಗುವುದು.

**ನಾಲ್ಕು ವೇದಗಳು ಮಹಾಭಾರತ, ಮೂಲ ರಾಮಾಯಣ, ಪಂಚರಾತ್ರಾಗಮಗಳು ಈ ಏಳರ** ಅಧ್ಯಯನದಿಂದ ಪರಮಾತ್ಮನ ಯತಾರ್ಥ ಜ್ಞಾನವು ಆಗುವುದು. ಹೀಗೆ ಅನುಮಾನವು (೧) ಪ್ರತ್ಯಕ್ಷದ ಮೇಲೆ ಅಥವಾ (೨) ಆಗಮಗಳ ಮೇಲೆ ಆಶ್ರಯಿಸಿದ್ದರೆ ಅದನ್ನು ಸದಾಗಮವೆಂದು ತಿಳಿಯಬೇಕು. ಅನುಮಾನವು ಪ್ರತ್ಯಕ್ಷ ಆಗಮಗಳನ್ನು ಆಧರಿಸದೇ ಬರೀ ತರ್ಕಿಸುವುದನ್ನು ದುಷ್ಟಾನುಮಾನವೆಂದು ಹೇಳಲಾಗಿದೆ. ಶ್ರೀಮದಾಚಾರ್ಯರು **"ಶುಷ್ಕ ತರ್ಕಂತು ವರ್ಜಯೇತ್"** ಎಂದು ತಿಳಿಸಿದ್ದಾರೆ.

**ಅನುಮಾನ ಅಂಗಗಳು : ಅನುಮಾನಕ್ಕೆ ನಾಲ್ಕು ಅಂಗಗಳಿರುವುದು**

| **(೧) ಪಕ್ಷ** | **(೨) ಸಾಧ್ಯ** | **(೩) ಹೇತು** | **(೪) ದೃಷ್ಟಾಂತ** |
|---|---|---|---|
| ↓ | ↓ | ↓ | ↓ |
| ವಸ್ತುವಿನಲ್ಲಿ | ಇರಲೇಬೇಕು | ಕಾರಣದಿಂದ | ಉದಾಹರಣೆ |
| ↓ | ↓ | ↓ | ↓ |
| ಪರ್ವತದಲ್ಲಿ | ಬೆಂಕಿ ಇದೆ | ಹೊಗೆ ಬರುತ್ತಿರುವುದರಿಂದ | ನಮ್ಮ ಅಡಿಗೆ ಮನೆಯಲ್ಲಿದ್ದಂತೆ |
| ↓ | ↓ | ↓ | ↓ |
| ಪರ್ವತಃ | ವಹ್ನಿಮಾನ್ | ಧೂಮತ್ವಾತ್ | ಯಥಾಮಹಾನಸೇ |

**ವಿವರಣೆ** – ಅಲ್ಲಿ ದೂರದ ಬೆಟ್ಟದಲ್ಲಿ ಬೆಂಕಿ ಇದೆ ಅಂತ ಖಚಿತವಾಗಿ ಹೇಳುತ್ತೇವೆ. ಆದರೆ ಬೆಟ್ಟವು ದೂರ ಇದೆ. ಅಲ್ಲಿರುವ ಬೆಂಕಿ ನಮಗೆ ಕಾಣಿಸುತ್ತಿಲ್ಲ. ಆದರೂ ಬೆಂಕಿ ಇದೆ ಅಂತ ಖಡಾ ಖಂಡಿತವಾಗಿ ಹೇಳುತ್ತೇವೆ. ಕಣ್ಣಿಗೆ ಕಾಣದೇ ಇರುವ ಬೆಂಕಿ ಇದೆ ಅಂತ ಹೇಳಬೇಕಾದರೆ "ಯಾವ ಆಧಾರದಿಂದ ಹೇಳುತ್ತೀರಿ" ಅಂದರೆ ಬೆಟ್ಟದಿಂದ ಹೊಗೆ ಬರುತ್ತಾ ಇದೆ ಎಂದ ಮೇಲೆ ಬೆಂಕಿ ಇದೆ ಅಂತ ಹೇಳುತ್ತೇನೆ. ಅದು ಹೇಗೆ ಹೇಳುತ್ತೀರಿ. ಹೊಗೆ ಇದ್ದರೆ ಬೆಂಕಿ ಇರಬೇಕು ಅಂತ ಹೇಳಬೇಕಾದರೆ ಒಂದು ಉದಾಹರಣೆ ಕೊಡಿ ಅಂತ ಕೇಳಿದಾಗ "ಮಹಾನಸೇ" ಅಡಿಗೆ ಮನೆಯಂತೆ ಅಂತ ಉತ್ತರ.

ಅಂದರೆ ನಮ್ಮ ಅಡಿಗೆ ಮನೆಯಲ್ಲಿ ಊಟ ತಯಾರು ಮಾಡಲು ಸೌದೆ ಹೊತ್ತಿಸಿದ್ದಾರೆ. ಸೌದೆ ಉರಿಯುವಾಗ ಬೆಂಕಿಯಿಂದ ಕೂಡಿದಾಗ ಹೊಗೆ ಬರುತ್ತೆ. ಅದನ್ನು ನಾವು ಅನುಭವದಿಂದ ನೋಡಿದ್ದೇವೆ. ಅಂತೆಯೇ ಬೆಟ್ಟದಲ್ಲಿ ಹೊಗೆ ಕಾಣಿಸುತ್ತಿದೆ ಅಂದ ಮೇಲೆ ಬೆಂಕಿ ಇರಬೇಕು. ಹೊಗೆ ಇದ್ದಲ್ಲೆಲ್ಲಾ ಬೆಂಕಿ ಇರಬೇಕು ಅನ್ನುವ ನಿಯಮವಿದೆ. **"ಯತ್ರ ಧೂಮಃ ತತ್ರ**

**ವಹ್ನಿಃ''**. ಅನುಮಾನಾಕಾರದಿಂದ ಹೇಳಬೇಕಾದರೆ ಬೆಟ್ಟವೆಂಬುದು **ಪಕ್ಷ** ಬೆಂಕಿ ಇದೆ ಎನ್ನುವುದು **ಸಾಧ್ಯ**. ಹೊಗೆ ಕಾಣುತ್ತಿದೆ ಈ ಕಾರಣದಿಂದ **ಹೇತು**. ನಮ್ಮ ಅಡಿಗೆ ಮನೆಯಲ್ಲಿ ಹೊಗೆ ಸಹಿತ ಬೆಂಕಿ ಇರುವುದು **ದೃಷ್ಟಾಂತ**.

ಶಾಸ್ತ್ರದ ಮಾತಿನಲ್ಲಿ ಬೆಟ್ಟದಲ್ಲಿರುವ ಹೊಗೆ ಸಹಿತ ಬೆಂಕಿ ಅಂದಾಗ ಪಕ್ಷದಲ್ಲಿ ಸಾಧ್ಯವಾಯಿತು. ಇದೇ ರೀತಿಯ ಧರ್ಮವು ಅಡಿಗೆಮನೆಯಲ್ಲಿ ಇದೆ ಎಂದಾಗ ಅಡಿಗೆಮನೆ ದೃಷ್ಟಾಂತ ಅಥವಾ ಸಪಕ್ಷವೆಂದು ತಿಳಿಯಬೇಕು. ಪಕ್ಷದಲ್ಲಿರುವ ಧರ್ಮವು ಸಪಕ್ಷದಲ್ಲಿರಬೇಕು. ಹೀಗೆ ಎಲ್ಲೆಲ್ಲಿ ಧೂಮವಿದೆಯೋ ಅಲ್ಲೆಲ್ಲಾ ಬೆಂಕಿ ಇರಬೇಕು. ಈ ಅನುಮಾನಕ್ಕೆ ವ್ಯಾಪ್ತಿ ಅಂತ. ವ್ಯಾಪ್ತಿ ಇಲ್ಲದೆ ಇರುವ ಅನುಮಾನವು ಸರಿಯಲ್ಲ.

ಧರ್ಮ ಅಂದರೆ ಲಕ್ಷಣವೆಂದೂ ತಿಳಿಯಬೇಕು. ಒಂದು ಪದಾರ್ಥದಲ್ಲಿರುವ ಲಕ್ಷಣವು ಅಂಥದ್ದೇ ಇನ್ನೂ ಅನೇಕ ವಸ್ತುಗಳಲ್ಲಿ ಇದ್ದರೆ ವ್ಯಾಪ್ತಿಯಾಗುತ್ತೆ. ಈ ಅನುಮಾನಕ್ಕೆ ಹೇತು (ಕಾರಣ) ಬಹಳ ಮುಖ್ಯ. ಹೀಗೆ ವಿವಿಧ ರೀತಿಯ ಅನುಮಾನಗಳು ಇರುವುದು. ಉದಾಹರಣೆಗೆ ನಾಲ್ಕು ರೀತಿಯನ್ನು ತಿಳಿಯೋಣ. ಹೇತುವು ಸಾಧ್ಯ ನಿಶ್ಚಯಕ್ಕೆ ವಿಷಯವಾದ ಸಪಕ್ಷದಲ್ಲಿಯೂ ಇರಬೇಕು. ಪಕ್ಷದಲ್ಲಿ ಧರ್ಮ ಇದೆ ಆದರೆ ವ್ಯಾಪ್ತಿ ಇಲ್ಲ. ಏಕೆಂದರೆ ಪಕ್ಷ ಧರ್ಮವು ಸಪಕ್ಷದಲ್ಲಿ ಇಲ್ಲ. ಉದಾಹರಣೆಗೆ ಬೆಂಕಿ ಇದೆ ಹೊಗೆ ಇಲ್ಲ ಅಂದರೆ ಬೆಂಕಿ ಇದ್ದಲ್ಲೆಲ್ಲಾ ಹೊಗೆ ಇರಬೇಕೆಂದು ನಿಯಮವಿಲ್ಲ. ಅದು ಹೇಗೆ ಎಂದರೆ ಎತ್ತಿನ ಗಾಡಿ ಚಕ್ರಕ್ಕೆ ಕಬ್ಬಿಣ ಬಳೆ ತೊಡಿಸಲು ಬಳೆಯನ್ನು ಕಾಯಿಸುತ್ತಾರೆ. ಅದು ಕಾದು ಕೆಂಪಗಾದಾಗ ಬೆಂಕಿ ಇದೆ. ಆದರೆ ಹೊಗೆಯೇ ಇಲ್ಲ. ಇದಕ್ಕೆ ''ಅವ್ಯಾಪ್ತಿ'' ಎಂದು. ಇದೇ ರೀತಿ ಹೊಗೆ ಬರುತ್ತಾ ಇದೆ ಬೆಂಕಿಯೇ ಇಲ್ಲ ಆಗ **''ಯತ್ರ ಧೂಮಃ ತತ್ರ ವಹ್ನಿಃ''** ಎಂಬ ನಿಯಮ ಭಂಗವಾಯಿತೆಂದರೆ ಹೊಗೆ ಬರುತ್ತಿರುವುದು ಬೆಂಕಿ ಇದೆ ಅಂತ ಅಲ್ಲ. ಮತ್ತೇನೆಂದರೆ ಸೌದೆ ತುಂಬಾ ಹಸಿಯಾಗಿದ್ದರೆ ಹೊಗೆ ಬರುತ್ತೇ ವಿನಃ ಬೆಂಕಿಯು ಇರುವುದಿಲ್ಲ. ಇದಕ್ಕೆ **''ಸಾಧ್ಯವ್ಯಾಪಕತ್ವೇಸತಿ ಸಾಧನ ಅವ್ಯಾಪಕತ್ವಂ ಉಪಾರ್ಧೇರ್ಲಕ್ಷಣಂ ಆರ್ದ್ರೇಂಧನ''** (ಉಪಾಧಿ) ಎನ್ನುತ್ತಾರೆ. ಮತ್ತೊಂದು ಇಲ್ಲಿ ಸರೋವರದಲ್ಲಿ ಹೊಗೆ ಇದೆ ಬೆಂಕಿ ಇಲ್ಲವಲ್ಲ? ಹೊಗೆಯಂತೆ ಕಾಣುವ ಹವೆಯಿಂದ ಭ್ರಾಂತಿ ಹೊಂದಿರುತ್ತೀರಿ. ಸರೋವರದಲ್ಲಿ ನೀರಿದೆ ಅಲ್ಲಿ ಬೆಂಕಿಯೂ ಇಲ್ಲ. ಹೊಗೆಯಂತೂ ಇರಲು ಸಾಧ್ಯವೇ ಇಲ್ಲ. ಇದು ಸದನುಮಾನಕ್ಕೆ ವಿರೋಧವು ಆಯಿತು.

**''ಹ್ರದೋ ವಹ್ನಿಮಾನ್ ಧೂಮತ್ವಾತ್''** ಪಕ್ಷದಲ್ಲಿ ವಹ್ನಿತ್ವವೆಂಬ ಸಾಧ್ಯವಿರುವುದಿಲ್ಲ. ಪಕ್ಷದಲ್ಲಿರುವ ಧರ್ಮ (ಲಕ್ಷಣ) ಇಂಥದ್ದೆ ಸಪಕ್ಷದಲ್ಲಿರಬೇಕು. ಹಾಗೆಲ್ಲದೆ ಬೇರೆ ವಿಜಾತಿಯ ವಸ್ತುಗಳಲ್ಲಿಯೂ ಕಂಡುಬಂದರೆ ಅತಿವ್ಯಾಪ್ತಿಯಾಯಿತು.

ಹಸುವಿನ ಲಕ್ಷಣ ಏನು ? ಉತ್ತರ – ಎರಡು ಕೋಡು ಇದೆ. ಕಾರಣ, ಆದರೆ ಎರಡು ಕೋಡು ಹಸುವಿಗಷ್ಟೆ ಅಲ್ಲದೇ ಅನೇಕ ಪ್ರಾಣಿಗಳಾದ ಎತ್ತು, ಎಮ್ಮೆ, ಆಡು, ಜಿಂಕೆ ಇತ್ಯಾದಿ ಮೃಗಗಳಲ್ಲಿ ಕಂಡಿರುವುದರಿಂದ, ಅತಿವ್ಯಾಪ್ತಿ ಆಯಿತು. ಹಸುವಿನ ಪ್ರತ್ಯೇಕ ಲಕ್ಷಣವಲ್ಲ. ಕಾಲಿನ ಗೊರಸು ಎರಡಾಗಿ ಸೀಳಿದೆ. ಅದಕ್ಕೆ ಹಸು ಅಂತೇನೇ ಅಂದರೆ ಅಲ್ಲಿಯೂ ಅಸಿದ್ಧಿ



ದೋಷವು ಬಂದಿತು. ಹಾಗಾದರೆ ಹಸುವಿನಲ್ಲಿರುವ ವಿಶಿಷ್ಟ ಲಕ್ಷಣ ಯಾವುದು ಎಂದಾಗ **'ಸ್ನಾಸ್ನಾದಿಮತ್ವಂ ಗೋರ್ಲಕ್ಷಣಂ'** ಗಂಗೆ ತೊಗಲು (ಕುತ್ತಿಗೆ ಕೆಳಗೆ ತೂಗಾಡುವ ಚರ್ಮ) ಇದೆ. ಅದೇ ಲಕ್ಷಣ ಅಂತೆನೆ. ಗಂಗೆ ಚರ್ಮ ಇರುವ ಎಲ್ಲ ಪ್ರಾಣಿಗಳು ಹಸುವೆಂದು ಕರೆಯುತ್ತಾರೆ. ಈ ಲಕ್ಷಣವು ಹಸುವನ್ನು ಬಿಟ್ಟು ಇತರ ಪ್ರಾಣಿಗಳಲ್ಲಿ ಕಂಡು ಬರುವುದಿಲ್ಲ. ಹೀಗೆ ಅನುಮಾನ ಪ್ರಕ್ರಿಯೆಗಳು ಅನೇಕವಿದೆ. ಇಲ್ಲಿಗೆ ಮುಗಿಸೋಣ.

ಶ್ರೀಮಜ್ಜಯತೀರ್ಥರು ಈನೇ ಪದ್ಯದಿಂದ ಶ್ರೀಮದಾಚಾರ್ಯರನ್ನು ಅನುಮಾನ ಸಾಮ್ಯದಿಂದ ವರ್ಣಿಸಿರುವುದನ್ನು ವಿಚಾರ ಮಾಡೋಣ.

ನಿಜೇ ಪಕ್ಷೇ = ತಮ್ಮ ಭಕ್ತರಲ್ಲಿ = ಪಕ್ಷ

ಭಕ್ತರು ಆಚಾರ್ಯರ ಮಹಾತ್ಮ್ಯವನ್ನು ತಿಳಿದಿರುತ್ತಾರೆ. ಆದ್ದರಿಂದ ಅವರಲ್ಲಿ ಶ್ರೀಮದಾಚಾರ್ಯರ ವಿಶೇಷ ಸನ್ನಿಧಾನ ಇರುವುದು. ಹೇಗೆ ಅಂದರೆ 'ನಿಜೇನ ಮಹಸಾ' ಶ್ರೀ ಆಚಾರ್ಯರು ತಮ್ಮ ಸ್ವಸಾಮರ್ಥ್ಯದಿಂದ ಭಕ್ತರ ಹೃದಯದಲ್ಲಿರುವರು. ಶ್ರೀಮದಾಚಾರ್ಯರಲ್ಲಿ ವಿಶ್ವಾಸ ಭಕ್ತಿ ಮಾಡುವವರು ಯಾರೇ ಆಗಲಿ ಅವರೆಲ್ಲರ ಹೃದಯದಲ್ಲಿ ವ್ಯಾಪಿಸಿರುವವರು. ಇಲ್ಲಿ ವ್ಯಾಪ್ತಿ ಬಂದಿತು. ಎಲ್ಲ ಭಕ್ತರ ಗುಂಪಿನಲ್ಲಿ ಆಚಾರ್ಯರು ಹೇತುರೂಪದಿಂದ ಇರುತ್ತಾರೆ. ಅದೇ ರೀತಿಯಾಗಿ ಶ್ರೀ ಆಚಾರ್ಯರ ಹೃದಯದಲ್ಲಿ (ಮನಸ್ಸಿನಲ್ಲಿ) ಶ್ರೀಮನ್ನಾರಾಯಣನು ಇರುವಂತೆ ಹೇಗೋ ಹಾಗೆ.

ಸಾರಾಂಶ : ಶ್ರೀಮದಾಚಾರ್ಯರು ಭಗವಂತನ ವಿಶೇಷ ಮಹಾತ್ಮ್ಯ ತಿಳಿದಿದ್ದುದರಿಂದ ಅವರ ಹೃದಯದಲ್ಲಿ ಭಗವಂತನು ಹೇಗೆ ಇರುತ್ತಾನೋ ಅದೇ ರೀತಿ ಆಚಾರ್ಯರ ಮಹಿಮೆ ತಿಳಿದವರಾದ ತಮ್ಮ ಭಕ್ತ ವರ್ಗದವರ ಹೃದಯದಲ್ಲಿ ಇರುತ್ತಾರೆ. ಹೀಗೆ ಹರಿಯೇ ಸರ್ವೋತ್ತಮನೆಂಬ ನಿಶ್ಚಯ ತತ್ವಜ್ಞಾನವಾಗಲು ಆಚಾರ್ಯರು ಮತ್ತೆ ಮತ್ತೆ ಬರುತ್ತಿರಲಿ (ಅವತರಿಸಲಿ). ಅವರ ಸಿದ್ಧಾಂತಕ್ಕೆ ಪ್ರತಿಪಕ್ಷಗಳಿಂದ ಆಕ್ಷೇಪಗಳು ಬಾಧಕ ಬರುವುದಿಲ್ಲ. ಅಂಥವರ ಅಪ ಸಿದ್ಧಾಂತಗಳಲ್ಲಿ(ಪ್ರಮಾಣವಿಲ್ಲದ) ಶ್ರೀ ಆಚಾರ್ಯರಿಗೆ ಆಸಕ್ತಿಯೇ ಇರುವುದಿಲ್ಲ. ಇದು ಈ ಶ್ಲೋಕದ ಒಟ್ಟು ತಾತ್ಪರ್ಯ.

ಶ್ರೀಮನ್ನ್ಯಾಯಸುಧಾದಲ್ಲಿ ಪ್ರತಿಪಕ್ಷದವರು ಅನೇಕ ರೀತಿಯ ಆಕ್ಷೇಪಗಳಿಗೆ ಸಪ್ರಮಾಣ ಯುಕ್ತಿಗಳಿಂದ ತಿರಸ್ಕಾರ ಮಾಡಿರುವುದು ಅತಿ ರಮಣೀಯ. ಶ್ರೀಮದಾಚಾರ್ಯರ ಸಿದ್ಧಾಂತ **'ತತ್ವಜ್ಞಾನ'** ವೇದ ಬ್ರಹ್ಮಸೂತ್ರಗಳಲ್ಲಿ ನಾರಾಯಣನ ವಿಷಯದ ಯತಾರ್ಥ ಜ್ಞಾನವನ್ನು ಸ್ಥಾಪಿಸಿರುತ್ತಾರೆ.

ಆದರೆ ವಿರೋಧ ಪಕ್ಷದವರು (ಪ್ರತಿಪಕ್ಷದವರು) ಒಡ್ಡಿದ ಆಕ್ಷೇಪಗಳು:

೧. ವೇದಗಳು = ಅಪೌರುಷೇಯವು ಹೇಗೆ ಮತ್ತು ಅಪ್ರಾಮಾಣ್ಯ ?
೨. ಬ್ರಹ್ಮಸೂತ್ರಗಳು = ವೇದಾರ್ಥ ನಿರ್ಣಾಯಕ ಕೃತಿ ಎಂದು ಹೇಗೆ ತಿಳಿಯಬೇಕು ?
೩. ಸೂತ್ರಗಳು = ವೇದವ್ಯಾಸರಿಂದ ರಚಿಸಿದ್ದು ಏಕೆ ಪ್ರಮಾಣ, ಅದಕ್ಕೆ ವ್ಯಾಖ್ಯಾನ ಆಚಾರ್ಯರು ಬರೆದಿದ್ದು ಆಯುಕ್ತವು. ಇನ್ನು ಬ್ರಹ್ಮ ಸೂತ್ರಗಳು ಒಬ್ಬ ವ್ಯಾಸರೆಂಬ

ವ್ಯಕ್ತಿಯಿಂದ ರಚಿಸಿದ್ದು ಪ್ರಮಾಣವಾಗಲಾರದು. ಕಾರಣ ಬರಹಗಾರನಲ್ಲಿರುವ ದೋಷಗಳು ಅವನ ಗ್ರಂಥದಲ್ಲಿ ಕಾಣಿಸಲು ಸಾಧ್ಯತೆ ಇರುವುದು. ಅವನು ವಂಚನೆ ಮಾಡಲೂಬಹುದು. ಇನ್ನು ಬ್ರಹ್ಮಸೂತ್ರಗಳು **ಪರವಿದ್ಯಾ** ಎಂದು ಕರೆದದ್ದು ಅಯುಕ್ತವು. ಅದನ್ನು **ಅನುತ್ತಮಂ ಶಾಸ್ತ್ರಂ** ಎಂತ ಹೇಳಿದ್ದು ಸರಿಯಲ್ಲ. ಆದ್ದರಿಂದ ಆಗಮಗಳು ಪ್ರಮಾಣವೆಂದು ತಿಳಿಯಲು ಬರುವುದಿಲ್ಲ. ಪುರುಷ ಕೃತ ಸೂತ್ರಗಳು ಅಪ್ರಮಾಣ.

೪. ನಾರಾಯಣನೇ ಏಕೆ ಸರ್ವೋತ್ತಮ. ಅವನಿಗೇ ಏಕೆ ನಮಸ್ಕರಿಸಿದರು ?

೫. ನಾರಾಯಣನು ಗುಣಪೂರ್ಣನೆಂದು ಹೇಗೆ ಹೇಳುತ್ತೀರಿ.

೬. ಗುಣಗಳಿರಬಹುದು – ದೋಷಗಳು ಏಕೆ ಇರಬಾರದು

೭. ಅವನೇ ಶ್ರೀ ಆಚಾರ್ಯರಿಗೆ ದೇವನೂ, ಗುರುವೂ ಹೇಗಾಗುತ್ತಾನೆ

೮. ಬ್ರಹ್ಮಸೂತ್ರಗಳನ್ನು ಅಧ್ಯಯನ ಪೂರ್ವದಲ್ಲಿ ಪ್ರತಿ ಸೂತ್ರದ ಮೊದಲು ಮತ್ತು ಕೊನೆಗೆ **ಓಂಕಾರವು** ಸೇರಿಸುವುದು ಅಯುಕ್ತವು. **ಉತ್ತರ** = "ಅನಂಕೃತಂ ಪರಂಬ್ರಹ್ಮ ಪರಸ್ತಾತ್ ವಿಶೀರ್ಯತೆ" ಎಂಬ ನಿಯಮ ಪ್ರಕಾರ ಓಂಕಾರವನ್ನು ಆದ್ಯಂತದಲ್ಲಿ ಉಚ್ಚರಿಸಲೇಬೇಕು.

೯. ಬ್ರಹ್ಮನು ನಾರಾಯಣನೆಂಬುದು ಹೇಗೆ ? **ಉತ್ತರ** = "ಬ್ರಹ್ಮ ಶಬ್ದಶ್ಚ ವಿಷ್ಣಾವೇವ" ಎಂದು ಪರಮ ಮುಖ್ಯ ವೃತ್ತಿಯಿಂದ ಬ್ರಹ್ಮ ಶಬ್ದ ಶ್ರೀಮನ್ನಾರಾಯಣನನ್ನೇ ತಿಳಿಸುತ್ತದೆ.

೧೦. ನಾರಾಯಣನ ಸ್ವರೂಪವೇ ಅಸಿದ್ಧ ಅಂದ ಮೇಲೆ ಏಕೆ ಜಿಜ್ಞಾಸೆ ಮಾಡಬೇಕು.

೧೧. ಬ್ರಹ್ಮ ಶಬ್ದದ ಅರ್ಥ ಜೀವನೆಂದೂ ಏಕೆ ಗ್ರಹಣ ಮಾಡಬಾರದು. ಸಿದ್ಧನಾದ ಜೀವನ ಬಗ್ಗೆ ವಿಚಾರ ಮಾಡುವುದು ಯುಕ್ತವಲ್ಲ.

೧೨. ವಿಷಯ ಜಿಜ್ಞಾಸಾ ಮಾಡಬೇಕಾದರೆ ಅದು ಸಂದಿಗ್ಧವಾಗಿರಬೇಕು. ಬ್ರಹ್ಮ ಶಬ್ದಿತ ಜೀವನು ಸಂದಿಗ್ಧವಾದ ವಿಷಯನೇ ಆಗುವುದಿಲ್ಲ.

೧೩. ನಿರ್ಗುಣನಾದ ಬ್ರಹ್ಮನ ಬಗ್ಗೆ ವಿಚಾರವು ಕೂಡುವುದಿಲ್ಲ.

೧೪. ಇಂತಹ ಬ್ರಹ್ಮನು ಜಗತ್ತನ್ನು ಸೃಷ್ಟಿ ಮಾಡುವುದು ಅಸಂಭವ.

೧೫. ಆಕಾಯ, ಶರೀರವೇ ಇಲ್ಲದ ನಿರಾಕಾರನಾದ ಬ್ರಹ್ಮನು ಜಗತ್ತನ್ನು ಸೃಷ್ಟಿ ಮಾಡಲು ಸಾಧ್ಯವೇ ಇಲ್ಲ.

೧೬. ಜಗತ್ತಾದರೂ ಮಾಯಾ ಕಲ್ಪಿತ–ಮಿಥ್ಯ

೧೭. ಅವನನ್ನು ತಿಳಿಸುವ ಆಗಮಗಳು (ವೇದಾದಿಗಳು) ಸತ್ಯವನ್ನೇ ತಿಳಿಸುತ್ತವೆಂದು ಹೇಳಲು ಬರುವುದಿಲ್ಲ. "ಜೊತಿಷ್ಟೊಮೇನ ಸ್ವರ್ಗ ಕಾಮೋಯಜೇತ" – ಸ್ವರ್ಗವನ್ನು ಬಯಸುವವರು "ಜೊತಿಷ್ಟೊಮ ಯಜ್ಞಮಾಡಬೇಕು" ಎಂದಿದೆ. ಯಜ್ಞಮಾಡಿದೆ ಸ್ವರ್ಗಲಭಿಸಲಿಲ್ಲ.ಅಂದಮೇಲೆ ವೇದವಾಕ್ಯಗಳು ಪ್ರಮಾಣವೆಂದು ಗ್ರಹಿಸಲು ಬರುವುದಿಲ್ಲ. ಅವುಗಳಲ್ಲಿ ಕೆಲ ವಾಕ್ಯಗಳನ್ನು ಬಿಟ್ಟರೆ ಬಾಕಿ ಎಲ್ಲಾ ವಾಕ್ಯಗಳು ಪ್ರಮಾಣವೆಂದು ಹೇಗೆ ಹೇಳಬೇಕು.

೧೮. ಇನ್ನು ಅನುಮಾನದಿಂದ ಏನನ್ನೂ ಸಾಧಿಸಲು ಆಗುವುದಿಲ್ಲ.

ಈ ಎಲ್ಲ ಕಾರಣಗಳಿಂದ ಈ ಗ್ರಂಥವೂ ಹಾಗೂ ವ್ಯಾಖ್ಯಾನವೂ ಅಧ್ಯಯನ ಮಾಡಲು ಅಯೋಗ್ಯವು ಅನಾರಂಭಾಣೀಯವು ಎಂದು ಎಷ್ಟು ಎಷ್ಟೆಷ್ಟು ತೊಡಕುಗಳು, ಆಕ್ಷೇಪಗಳನ್ನು



ಮಾಡಿದಕ್ಕೆಲ್ಲಾ ತಕ್ಕ ಉತ್ತರ ಯುಕ್ತಿಗಳಿಂದ ತಿಳಿಸಿ ಅವರಲ್ಲಿರುವ ದುಷ್ಟ ಸಿದ್ಧಾಂತವನ್ನು ಖಂಡಿಸಿ ಹರಿಯೇ ಸರ್ವೋತ್ತಮ ಜೀವ ಜಡಗಳಿಂದ ಭಿನ್ನ, ಜಗಜ್ಜನ್ಮಾದಿ ಕರ್ತ, ವೇದ ಸೂತ್ರ ಗಳ ಅಧ್ಯಯನದಿಂದಲೇ ಅವನ ಮಹಾತ್ಮ್ಯ ವಿಷಯಕ ಜ್ಞಾನ, ರಮಾ ಬ್ರಹ್ಮಾದಿಗಳಿಂದ ವಂದ್ಯನೂ, ಲಯಕರ್ತನೂ, ಅವನ ವಿಷಯಕ ಜ್ಞಾನದಿಂದ ಭಕ್ತಿ ದ್ವಾರ ಅವನ ಪರಮ ಪ್ರಸಾದ, ತದ ನಂತರ ಶಾಶ್ವತ ಆನಂದಾನುಭವ ರೂಪ ಮೋಕ್ಷವೇ ಶ್ರೇಷ್ಠಫಲವೆಂದು ಸಾಧಿಸಿರುತ್ತಾರೆ. ಆದ್ದರಿಂದ **"ಓಂ ಅಥಾತೋ ಬ್ರಹ್ಮ ಜಿಜ್ಞಾಸಾ ಓಂ"** ಎಂದು ತಿಳಿಸಿ ಶ್ರವಣ ಮನನ ಜಿಜ್ಞಾಸೆ ಮಾಡಬೇಕು, ಆರಂಭಣೀಯವೇ ಈ ಗ್ರಂಥವೆಂದು ಸಾಧಿಸಿ ಸಮರ್ಪಿಸಿರುತ್ತಾರೆ ಶ್ರೀ ಮಜ್ಜಯತೀರ್ಥರು.

ಜಿಜ್ಞಾಸಾಧಿಕರಣದಲ್ಲಿ ಮುಖ್ಯವಾದ ಘಟ್ಟಗಳೆಂದರೆ **ಅತಃ** ಶಬ್ದಕ್ಕೆ ನಾಲ್ಕು ರೀತಿಯ ಅರ್ಥವನ್ನು ಶ್ರೀಮಜ್ಜಯತೀರ್ಥರು ಅನುವಾದಿಸಿರುವುದು ಗಮನೀಯ.

**ಅತಃ** = ಅಧಿಕಾರ ಪ್ರಾಪ್ತಿ ಅನಂತರದಲ್ಲಿ.

**ಅತಃ** = ಮಂಗಳಾಸೂಚಕ ಶಬ್ದವೂ ಆಗುತ್ತೆ.

**ಅತಃ** = ಶಬ್ದವು ಬಂಧವು ಮಿಥ್ಯಾ ಆಗಬೇಕಿಲ್ಲ. ಬಂಧವು ಸತ್ಯವೇ ಆಗಿರುತ್ತೆ. ಆ ಬಂಧ ನಿವೃತಿಯು ಭಗವಂತನ ಪ್ರಸಾದದಿಂದ ಅಜ್ಞಾನ ನಿವೃತ್ತಿ ಆಗಿ ಸಮೀಚೀನಜ್ಞಾನ, ಅವನಲ್ಲಿ ಭಕ್ತಿ, ಭಕ್ತಿಯಿಂದ ಅವನ ಪರಮ ಪ್ರಸಾದ ರೂಪ ಮೋಕ್ಷವೇ ಫಲ.

**ಅತಃ** = ಶಬ್ದದಿಂದ ಪ್ರತ್ಯಕ್ಷವು ಹೇಗೆ ಪ್ರಮಾಣವೋ ಅಷ್ಟೇ ರೀತಿಯಿಂದ ಆಗಮಗಳು ಪ್ರಮಾಣವೆಂದು **"ಪ್ರತ್ಯಕ್ಷ ವಚ್ಚ ಪ್ರಾಮಾಣ್ಯಂ ಸ್ವತಃ ಆಗಮಸ್ಯ ಯೇವಹಿ"** ಎಂದು ವಿವರಿಸಲಾಗಿದೆ. ಮಾಯಾವಾದಿಗಳು ತಿಳಿಸಿದ ಪಂಚಮಹಾ ವಾಕ್ಯಗಳಾದ **ಅಹಂಬ್ರಹ್ಮಾಸ್ಮಿ ನೇಹನಾನಾಸ್ತಿ ಕಿಂಚನ, ಸರ್ವಂಖಲ್ವಿದಂ ಬ್ರಹ್ಮ, ತತ್ಸಮಸೀ** ಇತ್ಯಾದಿಗಳನ್ನು ಸಪ್ರಮಾಣದಿಂದ ಪರ್ಯಾಲೋಚನೆಯ ಆ ವಾಕ್ಯಗಳು ಭೇದ ಪರವಾಗಿಯೇ ತಿಳಿಸುವುದು ಎಂದು ಆಚಾರ್ಯರು ನಿರೂಪಿಸಿರುತ್ತಾರೆ.

**ಪಂಚಾಖ್ಯಾತಿ ವಾದಗಳು, ಆಖ್ಯಾತಿವಾದ, ಅನ್ಯಥಾಖ್ಯಾತಿವಾದ, ಅಸತ್ಆಖ್ಯಾತಿವಾದ ಅನಿರ್ವಚನೀಯ ಖ್ಯಾತಿವಾದ, ಸ್ವಭಾವಾಜ್ಞಾನ ವಾದಗಳ**ಲ್ಲಿರುವ ದೋಷಗಳನ್ನು ವಿವರವಾಗಿ ಅನುವಾದ ಮಾಡಿ ನಂತರ ಅವುಗಳನ್ನು ಖಂಡನೆ ಮಾಡಿರುವುದು ಅಮೋಘ.

ಈ ರೀತಿ ಅನೇಕ ವಿಧವಾಗಿ ತಿಳಿಸಿ ಶೃತಿಗಳಿಗೆ ಭೇದ ಬೋಧನೆಯಲ್ಲೆ ತಾತ್ಪರ್ಯವೆಂದು ಸಮರ್ಥಿಸಿರುತ್ತಾರೆ.

**"ತಸ್ಮಾಚ್ಛಾಸ್ತ್ರೇಣ ಜಿಜ್ಞಾಸ್ಯಂ ಅಸ್ಮದೀಯಂ ಗುಣಾರ್ಣವಃ ।**
**ವಾಸುದೇವಾಖ್ಯಮದ್ವಂದ್ವಂ ಪರಂ ಬ್ರಹ್ಮಾಖಿಲೋತ್ತವಮ್ ॥**

ಮ. ಭಾ. ತಾ ॥ ನಿರ್ಣಯದಲ್ಲಿ

**ಸರ್ವದೋಷ ವಿಹೀನತ್ಯಂ ಗುಣೈಸ್ಸರ್ವೈರುದೀರ್ಣತಾ ।**
**ಅಭೇದಂ ಸರ್ವರೂಪೇಷು ಜೀವ ಭೇದ ಸದೈವಹಿ ।**
**ವಿಷ್ಣೋರುಕ್ತಾನಿ ಸೂತ್ರೇಷು ಸರ್ವದೇವೇಡ್ಯತಾ ತಥಾ ।**
**ತಾರತಮ್ಯಂಚ ಮುಕ್ತಾನಾಂ ವಿಮುಕ್ತಿರ್ವಿದ್ಯಯಾತಥಾ ॥**

ಎಂದು ಸ್ಪಷ್ಟವಾಗಿ ಶ್ರೀ ಆಚಾರ್ಯರು ತಿಳಿಸಿರುತ್ತಾರೆ.

## ಶ್ರೀ ಮನ್ನ್ಯಾಯಸುಧಾ

ಆಚಾರ್ಯ ಶ್ರೀ ಮಧ್ವರು ಅನುವ್ಯಾಖ್ಯಾನದ ಮಂಗಳಾಚರಣೆ ರೂಪ ಆದಿ ಶ್ಲೋಕದಲ್ಲಿ ಸಂಕ್ಷೇಪವಾಗಿ ಸಮಸ್ತ ಶಾಸ್ತ್ರಾರ್ಥವನ್ನು ತಿಳಿಸಿರುತ್ತಾರೆ.

ಬ್ರಹ್ಮ ಮೀಮಾಂಸಾ ಶಾಸ್ತ್ರದಲ್ಲಿಯ ವಿಷಯುಗಳು ಅತಿ ಗುಹ್ಯ ಮತ್ತು ಗಂಭೀರವಾಗಿರುವುದರಿಂದ ತಮ್ಮ ಶಿಷ್ಯರುಗಳಿಗೆ ತಿಳಿಯಲು ಕಷ್ಟವಾಗುವುದೆಂದು ಗ್ರಹಿಸಿ, ಅಂತಹ ಶಾಸ್ತ್ರದಲ್ಲಿ ಆಸಕ್ತಿ, ಶ್ರದ್ಧೆ ಹುಟ್ಟಿಸಲು ಈ ಮೊದಲನೇ ಪದ್ಯದಲ್ಲಿ **''ಸಂಕ್ಷೇಪ ವಿಸ್ತರಾಭ್ಯಾಂ ಪ್ರವದಂತಿ ಮನೀಷಿಣಃ''** ಎಂಬಂತೆ ಸಮಸ್ತ ಶಾಸ್ತ್ರಾರ್ಥವು ಸಂಕ್ಷೇಪೇಣ ತಿಳಿಸಿರುತ್ತಾರೆ. ಅದು ಹೇಗೆ ಅಂದರೆ

ಭಗವಂತನು ಗುಣ ಪೂರ್ಣನು ಎಂಬುವುದನ್ನು ಸಾಧಿಸುವುದಕ್ಕಾಗಿ **''ನಿಖಿಲ ಪೂರ್ಣ ಗುಣೈಕದೇಹಂ''** ಎಂದು, ಅಂಥಾ ಬ್ರಹ್ಮನೇ ಜಿಜ್ಞಾಸ್ಯಕ್ಕೆ (ವಿಚಾರಕ್ಕೆ) ವಿಷಯನೆಂಬುದನ್ನೂ ತಿಳಿಸಿರುತ್ತಾರೆ. ಸಮಸ್ತ ವೇದ ಪುರಾಣಾದಿಗಳಲ್ಲಿ ತಾತ್ಪರ್ಯ ನಿರ್ಣಾಯಕಲಿಂಗಗಳಿಂದ ಶ್ರೀ ಹರಿಯೇ ಪರತತ್ವವೆಂಬುದನ್ನು ಪ್ರಥಮಾಧ್ಯಾಯವಾದ **ಸಮನ್ವಯಾಧ್ಯಾಯವು ಹೊರಟಿದೆ.**

**ವೇದೇ ರಾಮಾಯಣೇ ಚೈವೇ ಪುರಾಣೇ ಭಾರತೇ ತಥಾ ।**
**ಆದೌ ಅಂತ್ಯೇಚ ಮಧ್ಯೇಚ ವಿಷ್ಣುಃ ಸರ್ವತ್ರ ಗೀಯತೆ ॥**

ಗುಣಪೂರ್ಣತ್ವವಿರಬಹುದು, ಆದರೆ ದೋಷಗಳೂ ಏಕೆ ಇರಬಾರದೆಂಬ ಶಂಕಾ ಪರಿಹಾರಕ್ಕಾಗಿ ಶೃತಿ, ಸಮಯ, ಯುಕ್ತಿ, ಶೃತಿ, ಯುಕ್ತಿ ವಿರೋಧಗಳೆಂಬ ನಾಲ್ಕು ರೀತಿಯಿಂದ ಪರಿಶೀಲಿಸಿದರೆ ಬ್ರಹ್ಮನು ಯಾವ ರೀತಿಯ ದೋಷರಹಿತನೆಂಬುದನ್ನೂ ಎರಡನೇ **ಅವಿರೋಧ್ಯಾಯ**ದ ಸಾರವನ್ನು **''ನಿರ್ದೋಷಂ''** ಎಂಬುದರಿಂದ ತಿಳಿಸಿರುತ್ತಾರೆ.

ಇನ್ನು ಗುಣಪೂರ್ಣತ್ವ ದೋಷರಹಿತತ್ವಗಳೆಂಬುದನ್ನು ಸಮರ್ಥಿಸಿ ಮುಂದೆ ಅಂತಹ ಪರಬ್ರಹ್ಮನ ಸ್ವರೂಪವನ್ನು ಅಪರೋಕ್ಷಿಸಿಕೊಳ್ಳಬೇಕಾದರೆ, ಪ್ರಥಮತಃ ವೈರಾಗ್ಯ, ಭಕ್ತಿ, ಶ್ರವಣ, ಮನನ ಧ್ಯಾನ ಉಪಾಸನಾದಿಗಳಿಂದ ಸಾಧ್ಯವೆಂಬುದನ್ನು ಮೂರನೇ ಸಾಧನಾಧ್ಯಾಯದ ಸಾರವನ್ನು **''ಆಪ್ಯತಮಂ ಅಖಿಲೈಸ್ಸುವಾಕ್ಯೈಃ''** ಎಂಬುದರಿಂದ ವಿವರಿಸಲಾಗಿದೆ.

ಮೇಲೆ ತಿಳಿಸಿದ ರೀತ್ಯಾ ಸಾಧನಾದಿಗಳನ್ನು ಮಾಡಿದುದರಿಂದ ಲಭಿಸುವ ಫಲವೇನೆಂಬುದನ್ನು **''ಅಶೇಷ ವಿಶೇಷ ತೋಪಿ ಆಪ್ಯತಮಂ''** ಎಂಬ ವಾಕ್ಯದಿಂದ



ಭಗವತ್ಪ್ರಸಾದಾನಂತರ ಮೋಕ್ಷವಾಗುವುದಕ್ಕಾಗಿ ಮೊದಲು ಕರ್ಮನಾಶ, ಉತ್ಕ್ರಾಂತಿ, ಮಾರ್ಗ, ಭೋಗಗಳೆಂಬ ನಾಲ್ಕು ಪುರುಷಾರ್ಥಗಳನ್ನು ತಿಳಿಸಲಾಗಿದೆ. ಹೀಗೇ **''ಓಂ ಅಥಾತೋ ಬ್ರಹ್ಮ ಜಿಜ್ಞಾಸಾ ಓಂ''** ಎಂದು ಮೊದಲ್ಗೊಂಡು ಚತುರ್ಥಾಧ್ಯಾಯದ ಅಂತಿಮ ಸೂತ್ರ **''ಓಂ ಅನಾವೃತ್ತಿ ಶಬ್ದಾತ್ ಓಂ ಅನಾವೃತ್ತಿ ಶಬ್ದಾತ್ ಓಂ''**ದವರೆಗೂ ಸಮಸ್ತ ವಿಷಯಗಳನ್ನು ಸಮರ್ಥಿತ ರೀತಿಯಲ್ಲಿ ಈ ಶ್ಲೋಕದಲ್ಲಿ ಸಂಗ್ರಹವಾಗಿರುವುದು.

ಇಷ್ಟು ತಿಳಿದು ಬ್ರಹ್ಮಸೂತ್ರಗಳ ಪ್ರಥಮ ಸೂತ್ರವಾದ **''ಓಂ ಅಥಾತೋ ಬ್ರಹ್ಮ ಜಿಜ್ಞಾಸಾ ಓಂ''** ಇದರ ಸಂಗ್ರಹ ರೂಪ ಅರ್ಥವನ್ನು ಶ್ರೀಮದಾಚಾರ್ಯರು **''ಸದಾವಂದ್ಯಂ''** ಎಂಬುದರಿಂದ ತಿಳಿಸಿರುತ್ತಾರೆ.

**''ವಂದ್ಯಂ''** ಅಂದರೆ ನಮಸ್ಕಾರಕ್ಕೆ ಯೋಗ್ಯನು. ಅಂದರೆ ಭಕ್ತಿಪೂರ್ವಕ ಕಾಯಾವಾಚಮನಸ್ಸಿನಿಂದ ಮಾಡತಕ್ಕ ನಮನವು. ಹಾಗೇನೇ ಭಕ್ತಿಯಿಂದ ಅವನ ಬಗ್ಗೆ ಮಾನಸಿಕವಾಗಿ ವಿಚಾರ ಮಾಡುವುದು ಜಿಜ್ಞಾಸಾ ಎಂದು ಹೇಳಿದಂತಾಯಿತು.

ಈ ಸೂತ್ರದಿಂದ ತಿಳಿಯಬೇಕಾದ್ದು ಪರಮಾತ್ಮನು ಜೀವರುಗಳಿಂದ ಭಿನ್ನನು ಎಂಬ ಜ್ಞಾನವಾಗಬೇಕಾದರೆ, ನಾನು ದುಃಖಿ–ಸುಖಿ ಎಂಬ ಅನುಭವಗಳಿಂದ ಜೀವನು ಭಗವಂತನಿಂದ ಭಿನ್ನನೇ ಎಂಬುದು ಸಿದ್ಧವಾಗುವುದು. ಏತಸ್ಮಾತ್ ಕಾರಣಗಳಿಂದ ಜೀವನಿಂದ ಅತ್ಯಂತ ಭಿನ್ನನಾದ ಬ್ರಹ್ಮನ ವಿಷಯಕ ಜ್ಞಾನವು ಲಭಿಸುವುದಕ್ಕೋಸ್ಕರ ಅವನ ಬಗ್ಗೆ ವಿಚಾರವು (ಜಿಜ್ಞಾಸೆ) ಅತ್ಯಾವಶ್ಯ. ಇದನ್ನು ಶ್ರೀಮದಾಚಾರ್ಯರು ಬ್ರಹ್ಮನು **''ನಿಖಿಲ ಪೂರ್ಣ ಗುಣೈಕ ದೇಹಂ''** ಎಂದು ತಿಳಿಸಿ ಜೀವನು ಅಂಥಾ ಗುಣಹೀನಾಗಿದ್ದಾನಾದ್ದರಿಂದ ಬ್ರಹ್ಮನ ಉತ್ತಮತ್ವ ಮತ್ತು ಜೀವನ ಅಧಮತ್ವ, ಭಿನ್ನತ್ವವು ಸಿದ್ಧಿತವಾಯಿತು. ಇಷ್ಟೊಂದು ಅಭಿಪ್ರಾಯವು ಕೂಡಿದ್ದರಿಂದ ಬ್ರಹ್ಮಜಿಜ್ಞಾಸಾ ಕರ್ತವ್ಯವೆಂಬುದು ಸ್ಪಷ್ಟವಾಯಿತು.

**************

**ಆನಂದತೀರ್ಥ ಭಗವದ್ವದನೇಂದು ಬಿಂಬಂ । ವಿದ್ಯಾ ಸುಧಾ ವಿತತ ಕಾಂತಿ ಸುಕಾಂತಿ ಕಾಂತಂ।**
**ಯೈಃ ಪ್ರೈಕ್ಷತಾತ್ರ ಭವತಾಪ ಶಮಾಯ ಭಕ್ತ್ಯೈ। ಸ್ತದ್ದಾಸ ದಾಸ್ಯಮಪಿಕಿಂ ನದದಾತಿ ಪುಂಸಃ॥**

## ಶ್ರೀಹರಿವಿಠಲ

ಶ್ರೀಮನ್ನ್ಯಾಯಸುಧಾ ಅಧ್ಯಯನ ಮಾಡುವ ಪೂರ್ವದಲ್ಲಿ – ಆ ಗ್ರಂಥದಲ್ಲಿ ಉಕ್ತವಾದ ಕೆಲ ಪಾರಿಭಾಷಿಕ ಶಬ್ದಗಳು (Scriptural Technical Phraseologics) ತಕ್ಕಮಟ್ಟಿಗೆ ಪರಿಚಯವಿದ್ದರೆ ಗುರುಗಳು ಪಾಠ ಹೇಳುವಾಗ ಅನುಸರಿಸಲು (easy to follow) ಅನುಕೂಲವಾಗುವುದಕ್ಕಾಗಿ ಕೆಳಗೆ ತಿಳಿಸಲಾಗಿದೆ. ಏಕೆಂದರೆ ಶ್ರೀಮನ್ನ್ಯಾಯಸುಧಾ ಗ್ರಂಥದಲ್ಲಿ ಹೆಚ್ಚಾದ ಯುಕ್ತಿ / (Based on logic or argument reasoning) ಜಠಿಲತರ್ಕಗಳಿಂದ ಕೂಡಿರುತ್ತೆ. ಏತಸ್ಮಾತ್ ಕಾರಣದಿಂದ ಶ್ರೀಮನ್ನ್ಯಾಯಸುಧಾ ಪಾಠಪೂರ್ವದಲ್ಲಿ ಅಧ್ಯಯನ ಮಾಡುವವರಿಗೆ ಸಹಾಯವಾಗಬಹುದು.

ಆಚಾರ್ಯ ಶ್ರೀಮಧ್ವರ ಅನುವ್ಯಾಖ್ಯಾನಕ್ಕೆ ಟೀಕಾರೂಪ ಶ್ರೀಮನ್ನ್ಯಾಯಸುಧಾ ಕೃತಿಯು ನ್ಯಾಯೋಪೇತವಾಗಿದೆ.

ವಾತ್ಸ್ಯಾಯನ ತನ್ನ ಭಾಷ್ಯದಲ್ಲಿ ಪ್ರಾಮಣ್ಯ ಜ್ಞಾನವು. **ಉದ್ದೇಶ, ಲಕ್ಷಣ, ಪರೀಕ್ಷಾ –** ಈ ಮೂರಕ್ಕೆ ಅಧೀನವಾಗಿರುದೆಂದು ತಿಳಿಸಿರುತ್ತಾನೆ.

ಹಾಗಾದರೆ ಉದ್ದೇಶ, ಲಕ್ಷಣ ಮತ್ತು ಪರೀಕ್ಷಾ ಅಂದರೇನು ತಿಳಿಯೋಣ.

೧. **ಉದ್ದೇಶ –** ಒಂದು ವಸ್ತುವನ್ನು ಪ್ರತಿಪಾದಿಸುವ (ನಾಮಮಾತ್ಮಕ) ಶಬ್ದಗಳು. (Pointing to an object of motive)

೨. **ಲಕ್ಷಣ –** ಒಂದು ವಸ್ತುವಿನಲ್ಲಿ ಅಸಾಧಾರಣ ಧರ್ಮ ಇರುವಿಕೆ ಅಂದರೆ ಆ ಧರ್ಮವು ಆ ಜಾತಿಗೆ ಸಂಬಂಧಿಸಿದ್ದಾಗಿರಬೇಕು. ವಿಜಾತೀಯ ವಸ್ತುಗಳಲ್ಲಿ ಇರಬಾರದು. ಉದಾ : ಹಸುವಿನ ಲಕ್ಷಣ ಗಂಗೆ ತೊಗಲು ಆಕಳಿಗೇನೇ ಈ ರೀತಿ ಗಂಗೆ ತೊಗಲು ಇರುವುದು. ಅದಕ್ಕೆ ಸಾಸ್ನಾವಿಮತ್ವ ಎಂಬ ಧರ್ಮವು ಲಕ್ಷಣವಾಗುವುದು. ಈ ಒಂದು ಧರ್ಮವು (ಲಕ್ಷಣವು) ಆಕಳಗಳಲ್ಲಿಯೇ ಕಾಣುತ್ತೇವೆ. ಬೇರೆ ಯಾವ ಪಶುಗಳಲ್ಲಿ ಕಾಣಬರುವುದಿಲ್ಲ. ಆಗ ಆಕಳು ಇತರ ಪಶುಗಳನ್ನು ವ್ಯಾವರ್ತಿಸುತ್ತದೆ / ಪ್ರತ್ಯೇಕಿಸುತ್ತೆ. ಈ ರೀತಿ ಲಕ್ಷಣ ಜ್ಞಾನದಿಂದ ಜಗತ್ತಿನಲ್ಲಿ ವ್ಯವಹಾರ ನಡೆದು ಎರಡು ರೀತಿ ಫಲಕಾರಿ ಆಗುವುದು. (೧) ಒಂದನ್ನು ಇನ್ನೊಂದರಿಂದ ವಿಂಗಡಿಸುವುದು (ವ್ಯಾವೃತ್ತಿ) (೨) ವ್ಯವಹಾರ – ಆಕಳನ್ನು ತಾ ಎಂದಾಗ ಮೇಲೆ ಹೇಳಿದ ಲಕ್ಷಣವನ್ನು ಮನದಲ್ಲಿಟ್ಟುಕೊಂಡು ಎತ್ತು, ಎಮ್ಮೆ, ಮೇಕೆಗಳನ್ನು ಬಿಟ್ಟು ಆಕಳನ್ನೆ ತರುತ್ತೇವೆ.

೩. **ಲಕ್ಷ್ಯ – ಲಕ್ಷಣ** ಧರ್ಮ ಯಾವುದರಲ್ಲಿರುವುದೆಂವುದನ್ನು ತಿಳಿಸಲಾಗುವುದೋ ಅದಕ್ಕೆ ಲಕ್ಷ್ಯವೆನ್ನಬೇಕು. ಗಂಗೆ ತೊಗಲು (ಸಾನ್ನಾದಿಮತ್ವಂ) ಎಂಬ ಲಕ್ಷಣ / ಧರ್ಮ ಹಸುವಿನಲ್ಲೆ ಕಾಣಬರುವುದು. ಆಗ ಹಸು ಲಕ್ಷ್ಯವಾಯಿತು. ರಾಜಾಧರ್ಮಿಷ್ಟಃ ಎಂಬಲ್ಲಿ ರಾಜನು ಲಕ್ಷ್ಯವಾದರೆ ಧರ್ಮಿಷ್ಟ ಎಂಬುದು ಲಕ್ಷಣವಾಯಿತು.

**ವ್ಯಾಪ್ತಿ** = ಒಂದು ವಸ್ತುವಿನಲ್ಲಿರುವ ಲಕ್ಷಣವು (ಧರ್ಮ) ಅಂಥದೇ ಜಾತೀಯ ಪದಾರ್ಥಗಳಲ್ಲಿಯೂ ಕಾಣಬಂದರೆ ವ್ಯಾಪ್ತಿ (Pervading) ಆಗುವುದು.

ಒಂದು ಲಕ್ಷಣವು / ಧರ್ಮವು ಸರಿಯಾಗಿರದೆ ಮತ್ತು ವಿಪರೀತವಾಗಿರುವುದೋ ಅದಕ್ಕೆ ಅಲಕ್ಷಣವೆನ್ನಬೇಕು. ಅಂದರೆ ದೋಷದಿಂದ ಕೂಡಿದೆ ಅಂತ. ಇಲ್ಲಿ ಮೂರು ರೀತಿಯ ದೋಷಗಳನ್ನು ತಿಳಿಸಲಾಗಿದೆ. **(೧) ಅತಿವ್ಯಾಪ್ತಿ (೨) ಅವ್ಯಾಪ್ತಿ (೩) ಅಸಂಭವ**ವೆಂದು.

೧. **ಅತಿವ್ಯಾಪ್ತಿ** = ವಸ್ತುವಿನಲ್ಲಿರುವ ಲಕ್ಷಣ. ವಿಜಾತೀಯಗಳಲ್ಲಿಯೂ ಕಂಡುಬಂದರೆ ಅತಿವ್ಯಾಪ್ತಿ ಆಗುತ್ತೆ. ಉದಾಹರಣೆಗೆ "ಶೃಂಗಿತ್ವಂಗೋರ್ಲಕ್ಷಣಂ" ಕೋಡುಗಳಿದೆ ಆದ ಕಾರಣ ಆಕಳೆನ್ನುತ್ತೇನೆ ಅಂದರೆ ತಪ್ಪು. ಕೋಡು ಎಂಬ ಲಕ್ಷಣ ಆಕಳಿಗಲ್ಲದೆ ಬೇರೆ ಪಶುಗಳಾದ ಎಮ್ಮೆ, ಆಡು, ಜಿಂಕೆ, ಕೋಣ ಇತ್ಯಾದಿ ವಿಜಾತೀಯ ಪಶುಗಳಲ್ಲಿಯೂ ಇರುವುದು. ಆದ್ದರಿಂದ ಶೃಂಗಿತ್ವವು ಅತಿವ್ಯಾಪ್ತಿಯಾಯಿತು.



೨. **ಅವ್ಯಾಪ್ತಿ –** ಒಂದು ಲಕ್ಷಣವು. ಲಕ್ಷ್ಯದ ಒಂದೇ ಸ್ಥಾನದಲ್ಲಿದ್ದರೆ ಅವ್ಯಾಪ್ತಿ. ಆಕಳು ಕೆಂಪು ಬಣ್ಣದ್ದಾಗಿದೆ. ಆಗ ಆಕಳುಗಳೆಲ್ಲಾ ಕೇವಲ ಕೆಂಪು ರಂಗಿನಿಂದ ಇರದೆ ಕಪ್ಪು, ಗೋಧಿ ಬಣ್ಣದ್ದು, ಬಿಳೀಬಣ್ಣದ್ದು ಇರುವುದು. ಅಂದಾಗ ಕೆಂಪು ಬಣ್ಣವೆಂಬ ಲಕ್ಷಣವು ವ್ಯಾಪಕವಾಗಿರುವುದಿಲ್ಲ.

೩. **ಅಸಂಭವ –** ಲಕ್ಷಣವು (ಧರ್ಮವು) ಹೇಳಿದ ವಸ್ತುವನ್ನು ಬಿಟ್ಟು ಎಲ್ಲಿಯೂ ಇರಬಾರದು. "ಏಕಶಫತ್ವಂ ಗೋರ್ಲಕ್ಷಣಂ" ಎಂದರೆ ತಪ್ಪಾಗುವುದು. ಕಾರಣ ಆಕಳಿನ ಗೊರಸು ಸೀಳಿರುತ್ತೆ ವಿನಃ ಯಾವ ಆಕಳಿನ ಗೊರಸು ಸೀಳದೇ ಇರುವುದಿಲ್ಲ. ಆ ಲಕ್ಷಣ ಕುದುರೆಗೆ ಮಾತ್ರ ಅನ್ವಯಿಸುತ್ತದೆ. ಆಗ ಆಕಳಲ್ಲಿ ಆ ಧರ್ಮವು ಅಸಂಭವವಾಯಿತು.

**ಪ್ರಮಾಣಂ –** ವಸ್ತುವಿನ ಯಥಾರ್ಥಜ್ಞಾನ (ಇದ್ದುದನ್ನು ಇದ್ದಂತೆ ವಿಷಯೀಕರಿಸುವ ಅಥವಾ ಜ್ಞಾನ ಹುಟ್ಟಲ್ಲಿಕ್ಕೆ ಸಾಧನವು.

**ಪ್ರಮಾ**–ಯಥಾರ್ಥಜ್ಞಾನ. ಪ್ರಮೇಯ – ಜ್ಞಾನಕ್ಕೆ ವಿಷಯವಾದುದು – ಬ್ರಹ್ಮಜ್ಞಾನಕ್ಕೆ ಬ್ರಹ್ಮನೇ ವಿಷಯವು.) ಕೇವಲ ಪ್ರಮಾಣ, ಅನುಪ್ರಮಾಣ, ಜ್ಞಾನಸಾಧನ ರೂಪವಾದ **ಪ್ರತ್ಯಕ್ಷ, ಅನುಮಾನ, ಆಗಮು**ವೆಂಬ ಮೂರು ರೀತಿ.

**ವಿಪರ್ಯಯ –** ಒಂದು ವಸ್ತುವನ್ನು ವಿಪರೀತವಾಗಿ ನಿರ್ಣಯಿಸುವುದು (ಭ್ರಮೆ)

**ತರ್ಕ** (Logic)–ಕೇವಲ ತರ್ಕ ವಾದಿಸುವುದರಿಂದ ಯಾವ ನಿರ್ಣಯವೂ ಆಗುವುದಿಲ್ಲ.

**ಅನುಮಾನ –** ದೋಷರಹಿತ ಯುಕ್ತಿ ಇಂಥದ್ದರಿಂದ ಜನಿಸುವ ಜ್ಞಾನಕ್ಕೆ. ಅನುಮಿತಿ ಅಥವಾ ಅನುಮಾನವೆನ್ನಬಹುದು. ಅನುಮಾನಕ್ಕೆ ಸಾಧ್ಯವಾದವುಗಳು **ಪಕ್ಷ, ಸಾಧ್ಯ, ಹೇತು** ದೃಷ್ಟಾಂತ ಅಂತ.

**ಪಕ್ಷ –** ಇದನ್ನು ಈಗಾಗಲೇ ವಿವರಿಸಲಾಗಿದೆ.

**ಅನುಮಾನ ದೋಷಗಳು – ಪ್ರತಿಜ್ಞಾ, ವಿರೋಧ** ಮತ್ತು **ಪ್ರಮಾಣ ವಿರೋಧ.**

ಸ್ವವಚನ ವಿರೋಧ (Self Contradiction)
ಅಪಸಿದ್ಧಾಂತ (Refutation of an established view)

**ಅಸಿದ್ಧಿ –** ಕಣ್ಣಿಗೆ ಕಾಣುವ ಶಕ್ತಿ ಕಣ್ಣಿಗೇ ವಿನಃ ಕಿವಿ ನಾಲಿಗೆಗೆ ಇರುವುದಿಲ್ಲ. ಆಗ ಕಣ್ಣು ಕೇಳುತ್ತೇ ಅಂದರೆ ಅಸಿದ್ಧಿ ಆಯಿತು.

**ಅನೇಕಾಂತಿಕಾ** (ಇದು ಹೇತ್ವಾಭಾಸದಲ್ಲಿ ಸೇರಿದೆ. ಒಂದು ವಸ್ತುವಿನ ಲಕ್ಷಣ ಅನೇಕ ವಸ್ತುಗಳಲ್ಲಿ ಇರುವುದು. ಇದಕ್ಕೆ ವ್ಯಭಿಚಾರವೆನ್ನುವರು)

**ಅನವಸ್ಥಾ –** ಒಂದು ಧರ್ಮವು ಇನ್ನೊಂದು ವಸ್ತುವಿಗೆ ಕಾರಣ ಆ ವಸ್ತುವು ಮೊದಲಿನ ಧರ್ಮಕ್ಕೆ ಕಾರಣ. ನಿಶ್ಚಿತಜ್ಞಾನವಾಗದೇ ಇರುವುದು. ಉದಾ: ಬೀಜಾಂಕುರನ್ಯಾಯದಂತೆ ಬೀಜ ಮೊದಲೋ ವೃಕ್ಷವು ಮೊದಲೋ.

**ಉಪಾಧಿ –** ನನ್ನ ಬಿಂಬ ಕನ್ನಡಿಯಲ್ಲಿ ಪ್ರತಿಬಿಂಬವಾಗಿ ಕಾಣುತ್ತೆ. ಆಗ ಕನ್ನಡಿ ಉಪಾಧಿ

ಆಯಿತು. ಅದೇ ರೀತಿ ಬ್ರಹ್ಮ ಬಿಂಬ. ಅವನ ಪ್ರತಿಬಿಂಬರು ಜೀವರುಗಳು. ಅದನ್ನು ತಿಳಿಸುವುದು ಶರೀರ. ಆಗ ಶರೀರ ಉಪಾಧಿ ಆಯಿತು.

ಮಾಯಾವಾದಿಗಳ (ಇತರ ಮತೀಯರ) ಪ್ರಕಾರ **ಉಪಾಧಿ ನಾಶೋ ಪ್ರತಿಬಿಂಬನಾಶಃ** ಎಂತೆನ್ನುವರು. ಅಂದರೆ ಶರೀರ ನಾಶವಾದರೆ ಜೀವನೂ ನಾಶವಾಗುತ್ತಾನೆ. ಅಂತ ವಾದಿಸುವರು ಇದನ್ನು ಶ್ರೀಮದಾಚಾರ್ಯರು "ಉಪಾಧಿಖಂಡನ"ವೆಂಬ ಗ್ರಂಥದಲ್ಲಿ ಸವಿಸ್ತಾರವಾಗಿ ಖಂಡಿಸಿರುವರು.

ಅಜೋನಿತ್ಯ : ಶಾಶ್ವತೋಯಂ ಪುರಾಣೋ

ನಹನ್ಯತೇ ಹನ್ಯ ಮಾನ್ಯೇ ಶರೀರೆ (ಗೀತಾ ೨.೨೦)

(ಶರೀರ ನಾಶವಾದರೂ ಜೀವನು ನಿತ್ಯನೇ)

**ಆಗಮ** : ನಿರ್ದುಷ್ಟವಾದ ಶಬ್ದಗಳನ್ನು ಆಗಮವೆಂದು ತಿಳಿಯಬೇಕು.

ಒಂದು ವಾಕ್ಯವನ್ನೂ ಉಚ್ಚರಿಸಿದಾಗ **ಆಕಾಂಕ್ಷಾ** ಹುಟ್ಟಬೇಕು (**ಏನು–ಯಾಕೆ–ಹೇಗೆ–ಎಲ್ಲಿ** ಎಂಬ ಪ್ರಶ್ನೆಗಳಿಗೆ ಅವಕಾಶವಿರಬೇಕು.

**ಮುಖ್ಯ** ಮತ್ತು **ಪರಮ ಮುಖ್ಯ ವೃತ್ತಿ** – ಎಲ್ಲಾ ವೇದ ಬ್ರಹ್ಮ ಮೀಮಾಂಸ ಪುರಾಣಗಳು **ಪರಮ ಮುಖ್ಯ ವೃತ್ತಿ**ಯಿಂದ ಪರಬ್ರಹ್ಮನ ವಿಷಯವನ್ನು, ಅವಯವ ಶಕ್ತಿ ವಿದ್ವದ್ರೂಢಿಯಿಂದ ತಿಳಿಸುತ್ತದೆ. "ಅಗ್ನಿಮೀಳೇ ಪುರೋಹಿತಂ" ಎಂಬ ಋಕ್ ಮಂತ್ರದಲ್ಲಿ ಮೇಲೆ ಅಗ್ನಿ ಎಂದಾಗ ಮುಖ್ಯ ವೃತ್ತಿಯಿಂದ ಬೆಂಕೀ ಅಂತ ಅರ್ಥವಾದರೂ ಪರಮ ಮುಖ್ಯ ವೃತ್ತಿಯಿಂದ ಶ್ರೀಮನ್ನಾರಾಯಣನನ್ನೇ ಸೂಚಿಸುವುದು. ಹೀಗೆ ಆಚಾರ್ಯ ಶ್ರೀಮಧ್ವರು ಬ್ರಹ್ಮಸೂತ್ರಭಾಷ್ಯ ಪ್ರಥಮ ಸಾಧನಾಧ್ಯಾಯದಲ್ಲಿ ಎಲ್ಲಾ ನಾಮ, ಶಬ್ದ, ವರ್ಣಗಳು ಪರಮಾತ್ಮನನ್ನೇ ತಿಳಿಸುತ್ತವೆ ಎಂದೂ ತೋರಿಸಿಕೊಟ್ಟಿರುತ್ತಾರೆ.

ಹೀಗೆ ಅನೇಕ ರೀತಿ ಇರುವುದು. ಇವುಗಳ ವಿಸ್ತೃತ ಮತ್ತು ಹೆಚ್ಚಿನ ಜ್ಞಾನ ಶ್ರೇಷ್ಠ ವಿದ್ವಾಂಸರಿಂದ ಹೊಂದಬೇಕು.

**ಪೂರ್ಣಾಗಣ್ಯ ಗುಣೋದಾರ ಮೂರ್ತಯೇ ಪುಣ್ಯ ಕೀರ್ತಯೇ ।**
**ನಮಸ್ತಸ್ಮೈ ನಮಸ್ತಸ್ಮೈ ನಮಸ್ತಸ್ಮೈ ಚ ವಿಷ್ಣವೇ ॥**

**ಪಂ ॥ ಪ್ರೊ ॥ ಬದರೀನಾಥಾಚಾರ್ ಘೂಳಿ ಎಂ.ಎ.**
ನಿವೃತ್ತ ಪ್ರಾಧ್ಯಾಪಕರು
# ೧೬೪, ೭ನೇ ಅಡ್ಡ ರಸ್ತೆ, ೯ನೇ ಮುಖ್ಯ ಬೀದಿ,
ಬಿ.ಇ.ಎಂ.ಎಲ್. ಬಡಾವಣೆ, ರಾಜರಾಜೇಶ್ವರಿನಗರ,
ಬೆಂಗಳೂರು – ೫೬೦ ೦೯೮. ☎ : ೨೮೬೦೨೩೯೧

---

**ಶ್ರೀಮನ್ನ್ಯಾಯಸುಧಾ ಸಾರಾಮೃತಂ ಶ್ರೀಮದ್ರಾಘವೇಂದ್ರರ ಶ್ರೀ ಪರಿಮಳ ಸಹಿತ ಅನುವಾದ ನನ್ನ ಕೃತಿಯಲ್ಲಿ ಕಾಣಬಹುದು**

---

## ಶ್ರೀ ಮಾಧವ ಮಧ್ವ ಪ್ರಕಾಶನದ ಪ್ರಕಟಣೆಗಳು

| | | |
|---|---|---|
| 1. | **ಸಂಧ್ಯಾ ಚಂದ್ರಿಕಾ ಅರ್ಥಸಹಿತ ಮತ್ತು ಸಂಕ್ಷಿಪ್ತ ದೇವ ಪೂಜಾ ಪದ್ಧತಿ** | **ಪ್ರತಿಗಳು ಮುಗಿದಿವೆ** |
| 2. | **ಚತುಃಶ್ಲೋಕೀ ಭಾಗವತ ಕನ್ನಡ ಅನುವಾದ** | **ಪ್ರತಿಗಳು ಮುಗಿದಿವೆ** |
| 3. | **ಶ್ರೀಹರಿವಾಯುಸ್ತುತಿ (ಶ್ಲೋಕ ಅನ್ವಯ ಅರ್ಥ, ವಿಶೇಷಾಂಶಗಳೊಂದಿಗೆ)** | **ಪ್ರತಿಗಳು ಮುಗಿದಿವೆ** |
| 4. | **ಅಣುಭಾಷ್ಯಂ ಕನ್ನಡ ಅನುವಾದ** | **ಪ್ರತಿಗಳು ಮುಗಿದಿವೆ** |
| 5. | **ಶ್ರೀಮತ್ಕಾಟಕೋಪನಿಷತ್ (ಭಾಷ್ಯ ಖಂಡಾರ್ಥ ಸಹಿತ ಅನುವಾದ)** | **ಕೆಲವೇ ಪ್ರತಿಗಳು ಇವೆ** |
| 6. | **ಶ್ರೀ ರಘೂತ್ತಮ ತೀರ್ಥರು – ಜೀವನ ಕೃತಿ ಸ್ತೋತ್ರ – ಸಂಪಾದನೆ** | **ಕೆಲವೇ ಪ್ರತಿಗಳು ಇವೆ** |
| 7. | **ಶ್ರೀಮನ್ನ್ಯಾಯಸುಧಾ ಸಂಕ್ಷಿಪ್ತ ಪರಿಚಯಾತ್ಮಕ ನಿರೂಪಣೆ** | **ರೂ.** 15-00 |
| 8. | **ಬ್ರಹ್ಮಸೂತ್ರ ಭಾಷ್ಯ (ಕನ್ನಡ ಲಿಪಿಯಲ್ಲಿ) ಅವತಾರಿಕ ಸಹಿತ ನಿತ್ಯ ಪಾರಾಯಣ ಯೋಗ್ಯ** | **ರೂ.** 75-00 |
| 9. | Life and Works of Sri Jayathirtha in English | **ಮುದ್ರಣದಲ್ಲಿದೆ** |

### ಮುಂಬರುವ ಕೃತಿಗಳು

1. **ಬ್ರಹ್ಮ ಸೂತ್ರ ಭಾಷ್ಯ (ತತ್ವ ಪ್ರಕಾಶಿಕ ಭಾವದೀಪ ಸಹಿತ ಕನ್ನಡದಲ್ಲೇ ಅನುವಾದ**
2. **ಷಟ್ಪ್ರಶ್ನೋಪನಿಷತ್ – ಭಾಷ್ಯ ಖಂಡಾರ್ಥದೊಂದಿಗೆ ಅನುವಾದ**
3. Tantra Sara Sangraha - in English & Kannada (Illustrated)